ಕುಲದೀಪ್‌ಸಿಂಗ್ ಆಯೋಗದ ವರದಿ ಬಗ್ಗೆ ಚರ್ಚೆಗೆ ಅವಕಾಶಕೋರಿ ಮನವಿ

ಶ್ರೀ ಪಾಟೀಲ್ ನಾಗರಾಜ್.— ಅಧ್ಯಕ್ಷರೆ, ಕುಲದೀಪ್ ಸಿಂಗ್ ಆಯೋಗದ ವರದಿ ಬಗ್ಗೆ...

(ಗೊಂದಲ)

ಅಧ್ಯಕ್ಷರು.— ತಮ್ಮಲ್ಲಿ ಒಬ್ಬೊಬ್ಬರು ಮಾತನಾಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ಕುಲದೀಪ್‌ಸಿಂಗ್ ಆಯೋಗದ ವರದಿ ಹೊರಬಿದ್ದಿದೆ. ಈಗ ಅದು ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ. ಮೊನ್ನೆ ಕೇಳಿದಾಗ ಅದು ಪಬ್ಲಿಕ್‌ಗೆ ಬಂದಿಲ್ಲ ಎಂದು ಹೇಳಿದರು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದುವಂಥ ಸ್ಥಿತಿಗೆ ಬರುವುದು ಅಲ್ಲ. ಇದು ಈ ಸದನಕ್ಕೆ ಸಂಬಂಧಪಟ್ಟಂತಹಾಗಿರುವುದರಿಂದ ಇದರ ಬಗ್ಗೆ ಚರ್ಚೆಗೆ ಒಂದು ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಈಗ ಬೇರೆ ಕಡೆಗಳಲ್ಲೂ ಪತ್ರಿಕೆಗಳಲ್ಲಿ ಬಂದಿದ್ದು ಇದರ ವಿವರವನ್ನು ಓದುವಂಥ ಸ್ಥಿತಿಗೆ ಬಂದಿದೆ ಇದು ನಮ್ಮ ರಾಜ್ಯಕ್ಕೆ ಸೀಮಿತವಾಗಿ, ಸಂಬಂಧವಾದ ವಿಷಯವಾಗಿರುವುದರಿಂದ ಇಲ್ಲಿ ದೀರ್ಘವಾದಂಥ ಚರ್ಚೆಗೆ ಮತ್ತು ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳುವಂಥಾದ್ದಕ್ಕೆ ಪ್ರಯತ್ನ ಆಗಬೇಕಾದರೆ ಮಾನ್ಯ ಅಧ್ಯಕ್ಷರು ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಪಾಟೀಲ್ ನಾಗರಾಜ್.—ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಕುಲದೀಪ್‌ಸಿಂಗ್ ಆಯೋಗದ ವರದಿಯಿಂದ ಅನೇಕ ವಿಚಾರಗಳು ಬೆಳಕಿಗೆ ಬಂದಿವೆ. ಈಗ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರ ನಿಲುವು ಏನು ಎಂದು ತಿಳಿಸಬೇಕು. ಕುಲದೀಪ್‌ಸಿಂಗ್ ಆಯೋಗದ ವರದಿ ಇಲ್ಲಿ ಚರ್ಚೆ ಆಗತಕ್ಕ ವಿಚಾರವಾಗಿದೆ.

(ಗೊಂದಲ)

ಅಧ್ಯಕ್ಷರು.— ಈಗ ನಾನು ಕರೆಯುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕುಲದೀಪ್‌ಸಿಂಗ್ ಆಯೋಗದ ವರದಿ ಹೊರಗೆ ಬಂದಿರತಕ್ಕ ವಿಚಾರ ಇದೆ.

ಅಧ್ಯಕ್ಷರು.— ಈಗ ತಾವು ನೋಟೀಸ್ ಕಳುಹಿಸಿಕೊಟ್ಟಿದ್ದೀರಿ. ಕುಲದೀದೀಪ್‌ಸಿಂಗ್ ನ್ಯಾಯಾಂಗ ತನಿಖೆಯ ರಿಪೋರ್ಟ್ ನಿಮ್ಮಲ್ಲಿ ಇದ್ದರೆ ನನಗೆ ಕಳುಹಿಸಿಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ. —ಅಧ್ಯಕ್ಷರೆ, ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಅಧ್ಯಕ್ಷರು.—ನನ್ನ ಪ್ರಶ್ನೆಗೆ ನಿರ್ದಿಷ್ಟವಾದಂಥ ಉತ್ತರವನ್ನು ನಿಮ್ಮಿಂದ ಅಪೇಕ್ಷಿಸುತ್ತೇನೆ. ನಿಮ್ಮ ಹತ್ತಿರ ಇದ್ದರೆ ಕಳುಹಿಸಿಕೊಡಿ. ನಾನು ಅದನ್ನು ನೋಡಬೇಕು.

(ಗೊಂದಲ)

MR. SPEAKER.—Order please. I call the Members to order. I call the (to Hon. Member Sri Shivaramegowda) to order. ದಯುವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ನಾನು ನಿಂತಿದ್ದೇನೆ. ನಾನು ಒಂದು ಸಿಂಪಲ್ ಪ್ರಪೋಸಿಷನ್ ಕೇಳುತ್ತೇನೆ. ಕುಲದೀಪ್‌ಸಿಂಗ್ ಆಯೋಗದ ವರದಿ ಯಾರ ಹತ್ತಿರ ಆದರೂ ಇಲ್ಲಿ ಇದೆಯೇ ? ನಾನು ಇವೊತ್ತು ಬೆಳಿಗ್ಗೆ ಆಯೋಗದ ವರದಿಯನ್ನು ಕೇಂದ್ರ ಪಾರ್ಲಿಮೆಂಟ್ ಲೈಬ್ರರಿಯಲ್ಲಿ ಇಟ್ಟಿದ್ದೇವೆ ಎಂದು ನಮೂದು ಆಗಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೆ. ಈಗ ನಮ್ಮ ಯಾರ ಹತ್ತಿರವೂಕೂಡ ವರದಿ ಇಲ್ಲ, I would like to know if the

Government has received a copy of the Report which Justice Kuldip Singh submitted to the Government.

(INTERRUPTIONS)

MR. SPEAKER.—Order, order please.

(INTERRUPTIONS)

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ನಾವು ತಮ್ಮ ಹತ್ತಿರ ಪ್ರಸ್ತಾಪ ಮಾಡಿದಾಗ ವರದಿ ಬಂದಮೇಲೆ ನೋಡೋಣವೆಂದು ಹೇಳಿದ್ದಿರಿ. ಅದೇರೀತಿ ವರದಿ ಬಂದಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶವಾಗಲಿ ಎಂದು ನಾವು ಸುಮ್ಮನಿದ್ದೆವು. ಇವತ್ತು ಎಲ್ಲ ಪತ್ರಿಕೆಗಳಲ್ಲಿ ಆ ವರದಿ ಬಿಡುಗಡೆಯಾಗಿದೆ. ಪ್ರತಿಯೊಂದು ಅಂಶವನ್ನೂ ಕೂಡ ಮಾನ್ಯ ಕುಲದೀಪ್‌ಸಿಂಗ್‌ರವರು ತಮ್ಮ ೩೦೩ ಪುಟಗಳ ವರದಿಯಲ್ಲಿ ಕೊಟ್ಟಿದ್ದಾರೆ. ಅದು ಸಂಪೂರ್ಣವಾಗಿ ಪತ್ರಿಕೆಗಳಲ್ಲಿ ಬಿಡುಗಡೆಯಾಗಿದೆ. ನೀವು ಇವತ್ತು ಚರ್ಚೆಗೆ ಅವಕಾಶ ಕೊಡದಿದ್ದರೆ ಇನ್ನು ಯಾವತ್ತು ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್.—ಕುಲದೀಪ್ ಸಿಂಗ್ ಆಯೋಗ ನೇಮಕವಾದುದು, ಆ ಆಯೋಗದ ಕಾರ್ಯಕ್ರಮ ಮತ್ತು ಕಾರ್ಯಾಲಯ ಎಲ್ಲವೂ ಕೂಡ ಕರ್ನಾಟಕದಲ್ಲೇ ನಡೆದಿರತಕ್ಕದ್ದು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವರದಿಯ ಬಗ್ಗೆ ನಮ್ಮೆಲ್ಲರ ಆಗ್ರಹ ಏನೆಂದರೆ, ಸರ್ಕಾರಕ್ಕೆ ಏನಾದರೂ ಈ ವರದಿ ಬಂದಿದೆಯೋ? ಎಂಬುದು. ಏಕೆಂದರೆ ಇವತ್ತು ಇಡೀ ರಾಷ್ಟ್ರದ ಎಲ್ಲ ಪತ್ರಿಕೆಗಳಲ್ಲೂ ಆ ವರದಿಯ ಸಮಗ್ರವಾದ ಅಂಶಗಳು ಬಹಿರಂಗವಾಗಿದೆ. ಅಂದರೆ ಸ್ವಲ್ಪ ಹೆಚ್ಚೂ ಕಡಿಮೆ ಆ ವರದಿ ನಮ್ಮ ಕೈಸೇರಿತು ಎಂತಲೇ ಅರ್ಥವಾಗುತ್ತದೆ. ಇದು ನನ್ನ ವಾದ. ಆದರೆ ತಾವು ಇದನ್ನು ಇಲ್ಲ ಎಂದು ಹೇಳುವುದಾದರೆ ...

ಅಧ್ಯಕ್ಷರು. ನಾನು ಮಧ್ಯೆ ಪ್ರವೇಶ ಮಾಡಲೆ? ನೀವು ಹೇಳಿದಿರಿ ಅದು ೩೦೩ ಪುಟಗಳು ಇರತಕ್ಕ ವರದಿ ಅಂತ. ಇವತ್ತು ಪತ್ರಿಕೆಗಳಲ್ಲಿ ಎಷ್ಟು ಪುಟಗಳ ವರದಿ ಇದೆ?

ಶ್ರೀ ವಾಟಾಳ್ ನಾಗರಾಜ್.—೩೦೦ಕ್ಕೂ ಹೆಚ್ಚಿಗೆ ಇರತಕ್ಕ ಪುಟಗಳಲ್ಲಿರುವ ವರದಿಯನ್ನು ಸಂಕ್ಷಿಪ್ತವಾಗಿ ಪ್ರಮುಖವಾದ ವಿಚಾರಗಳು ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ನಾವು ಬೆಳಕನ್ನು ಚೆಲ್ಲಬೇಕಾಗಿದೆ. ಆ ವರದಿ ನಮಗೆ ಬಂದಿದೆಯೆಂದು ನಾನು ಹೇಳುವುದಿಲ್ಲ ಮತ್ತು ತಮಗೂ ಕೂಡ ಬಂದಿದೆಯೆಂದು ನಾನು ಹೇಳುತ್ತಿಲ್ಲ. ಒಂದು ವಾರದ ಹಿಂದೆ ಇದೇ ಪ್ರಶ್ನೆಯನ್ನು ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು, ನಾನು ಆ ವರದಿಯನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಸಂಬಂಧಪಟ್ಟವರ ಜೊತೆ ಸಂಪರ್ಕ ಮಾಡುತ್ತಿದ್ದೇನೆ ಅಂತ ಹೇಳಿದರು. ಇವತ್ತು ಅದು ವರದಿಯಾಗಿರುವುದರಿಂದ ಸರ್ಕಾರ ಅದರ ಬಗ್ಗೆ ಒಂದು ಸಮಗ್ರವಾದ ಹೇಳಿಕೆಯನ್ನು ಕೊಡಬೇಕು ಮತ್ತು ಆ ವರದಿ ಬಂದಿದೆಯೆ, ಇಲ್ಲವೇ ಎಂಬುದನ್ನು ಹೇಳಬೇಕು ಹಾಗೂ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ತಾವು ಅವಕಾಶವನ್ನು ಕೊಡಬೇಕು. ಮೊನ್ನೆಯಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅದರ ಪ್ರಕಾರ ನೀವೂ ಅವಕಾಶವನ್ನು ಕೊಡಲೇಬೇಕೆಂದು ನಾನು ಒತ್ತಾಯ ಮಾಡುತ್ತಿಲ್ಲ. ಅದು ತಮಗೆ ಸೇರಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಕುಲ್‌ದೀಪ್‌ಸಿಂಗ್ ಆಯೋಗದ ವರದಿಯ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಆದರೆ ಅದರ ಪೂರ್ಣ ವಿವರ ನಮ್ಮ ಹತ್ತಿರ ಇಲ್ಲದೇ ಇರುವುದರಿಂದ ಬಹುಶಃ ಅದನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಕಷ್ಟವಾಗಬಹುದು. ಬಹುಶಃ ಅದು ಈಗಾಗಲೇ ಸರ್ಕಾರದ ಕೈ ಸೇರಿರಬಹುದು. ಒಂದು ವೇಳೆ ಸರ್ಕಾರದ ಕೈಗೆ ಸೇರಿಲ್ಲದಿದ್ದರೆ ಅದು ಸರ್ಕಾರದ ಕರ್ತವ್ಯಲೋಪವಾಗುತ್ತದೆಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಕ್ಷಣ ಆ ವರದಿಯ ಪ್ರತಿಯನ್ನು ತರಿಸಿಕೊಳ್ಳತಕ್ಕ ಪ್ರಯತ್ನವನ್ನು ಮಾಡಿರುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ಆ ವರದಿಯ ಪ್ರತಿ ಮಾನ್ಯ ಮುಖ್ಯ ಮಂತ್ರಿಗಳ ಕೈಗೆ ಸೇರಿದ್ದರೆ ಅದನ್ನು ಜೆರಾಕ್ಸ್ ಮಾಡಿಸಿ ಎಲ್ಲ ಮಾನ್ಯ ಸದಸ್ಯರಿಗೂ ಒದಗಿಸಿ, ಅದರ ಬಗ್ಗೆ ಪೂರ್ಣ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ. ಕುಲ್‌ದೀಪ್‌ಸಿಂಗ್ ಆಯೋಗದ ವರದಿಯನ್ನು ಲೋಕಸಭೆಯ ಲೈಬ್ರರಿಯಲ್ಲಿ ಇಟ್ಟಿದ್ದಾರೆ, ಅಲ್ಲಿ ಹೋಗಿ ನೋಡಬೇಕೆಂದು......

ಅಧ್ಯಕ್ಷರು.— ನಾನು ಆ ರೀತಿ ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ವರದಿ ಪ್ರಕಟವಾಗುವುದಕ್ಕೆ ಮುಂಚೆ ಪ್ರಸ್ತಾಪ ಮಾಡುವುದಕ್ಕೂ, ಇವತ್ತು ಪ್ರಸ್ತಾಪ ಮಾಡುವುದಕ್ಕೂ ವ್ಯತ್ಯಾಸವಿದೆ. ಈ ವರದಿ ಇವತ್ತು ಪಬ್ಲಿಷ್ ಆಗಿದೆ. ಆ ವರದಿಯಲ್ಲಿ ರೆಕಮೆಂಡ್ ಆಗಿರತಕ್ಕ ಅಂಶಗಳನ್ನು ಎಲ್ಲ ಪತ್ರಿಕೆಗಳೂ ಪ್ರಕಟ ಮಾಡಿವೆ. ಇದು ಹಿಂದೆ ಪ್ರಕಟವಾಗಿರಲಿಲ್ಲ, ಈಗ ಪ್ರಕಟವಾಗಿದೆ. ದೆಹಲಿಯ ಪಾರ್ಲಿಮೆಂಟ್‌ನ ಲೈಬ್ರರಿಯಲ್ಲಿ ಇರತಕ್ಕದ್ದನ್ನು ಓದಿಕೊಂಡು ಬಂದು ಇಲ್ಲಿ ಚರ್ಚೆ ಮಾಡುವುದಕ್ಕೂ ಅವಕಾಶವಿದೆ. ಒಂದು ವೇಳೆ ಓದಿ ಬರದಿದ್ದರೂ ಪುನಃ ಇದನ್ನು ಪ್ರಕಟ ಮಾಡಿದರೂ ಅದರ ಆಧಾರದ ಮೇಲೆ ಪ್ರಸ್ತಾಪ ಮಾಡಲಿಕ್ಕೂ ಅವಕಾಶವಿದೆ ಇವತ್ತು ಚರ್ಚೆಗೆ ವಸ್ತು ನಿಖರವಾಗಿ ಸಿಕ್ಕಿರುವುದರಿಂದ. ಕೇಂದ್ರ ಸರ್ಕಾರ ಇದನ್ನು ಅಧಿಕೃತವಾಗಿ ಪ್ರಕಟ ಮಾಡಿರುವುದರಿಂದ ಇವತ್ತು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಯೋಗ್ಯವಾಗಿದೆ. ಆದ್ದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಸಭಾಧ್ಯಕ್ಷರೆ, ಈ ವಿಚಾರ ಸದನದಲ್ಲಿ ಪದೇ ಪದೇ ಪ್ರಸ್ತಾಪ ಆಗುತ್ತಿದೆ. ಮಾನ್ಯ ಸದಸ್ಯರಾದ ಶಿವರಾಮೇಗೌಡರು ಮಾತನಾಡುವಾಗ ತಾವು ಒಂದು ಮಾತನ್ನು ಹೇಳಿದಿರಿ. ಅದೇನೆಂದರೆ, ಆ ವರದಿ ತಮ್ಮ ಹತ್ತಿರ ಇದ್ದಾಗ ನನಗೆ ಕಳುಹಿಸಿಕೊಡಿ ಎಂದು ಹೇಳಿದಿರಿ. ಅಷ್ಟೇ ಅಲ್ಲ, ಸರ್ಕಾರದವರೂ ಕೂಡ ಏನಾದರೂ ಹೇಳುವುದಿದ್ದರೆ ಹೇಳಬಹುದೆಂದೂ ಹೇಳಿದ್ದೀರಿ. ಇದರ ಅರ್ಥ ಏನೆಂದರೆ, ಸರ್ಕಾರಕ್ಕೆ ಏನಾದರೂ ವರದಿ ಬಂದಿದ್ದರೆ ಅದನ್ನು ಸದನಕ್ಕೆ ತಿಳಿಸಬೇಕೆಂದ. ನಿಮ್ಮ ಸೂಚನೆ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಪತ್ರಿಕೆಗಳಲ್ಲಿ ಬಂದಿರತಕ್ಕ ಅನೇಕ ವಿಚಾರಗಳನ್ನು ಈ ಸದನದಲ್ಲಿ ಮಾತ್ರವಲ್ಲ, ಪಾರ್ಲಿಮೆಂಟ್‌ನಲ್ಲೂ ಕೂಡ ಚರ್ಚೆಯಾಗಿರತಕ್ಕ ನಿದರ್ಶನಗಳು ಬಹಳಷ್ಟು ಇದೆ. ಉದಾಹರಣೆಗೆ ಹೇಳುವುದಾದರೆ, ಬೋಫರ್ಸ್ ಪ್ರಕರಣದ ಮೇಲೆ ಬಂದಂಥ ವರದಿ ಪತ್ರಿಕೆಯಲ್ಲಿ ಬಂದಿದ್ದು, ಸ್ವೀಡಿಷ್ ರೇಡಿಯೋ ಅನೌನ್ಸ್ ಮಾಡಿದ್ದು ಈ ದೇಶದ ಪತ್ರಿಕೆಗಳಲ್ಲಿ ಪ್ರಮುಖವಾಗಿ ಪ್ರಿಂಟ್ ಆದುದರಿಂದ ಅದೂ ಕೂಡ ಚರ್ಚೆ ಆಯಿತು. ಚರ್ಚೆಯಾದ ಮೇಲೆ ಪಾರ್ಲಿಮೆಂಟ್‌ನಲ್ಲಿ ಒಂದು ಸಮಿತಿ ರಚನೆಯಾಯಿತು. ವಿಚಾರಣೆಯೂ ಆಯಿತು. ಈಗ ನಾನು ಅವರ ಬಗ್ಗೆ ಮುಂದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ ಪತ್ರಿಕೆಗಳಲ್ಲಿ ಬಂದಿರುವ ವಿಷಯಗಳು ಚರ್ಚೆಯಾಗಿರತಕ್ಕಂಥ ನಿದರ್ಶನಗಳು ಈ ದೇಶದಲ್ಲಿ ಸಾಕಷ್ಟು ಇವೆ. ಪತ್ರಿಕೆಯಲ್ಲಿ ಮಾತ್ರ ಬಂದ ವರದಿ ಬಗ್ಗೆ ಚರ್ಚೆಯಾಗತಕ್ಕಂಥದ್ದು ಸರಿಯಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಬಂದು, ತಾವು ಹೇಳಿ ಇಲ್ಲಿ ಆ ರೀತಿಯಾದ ತೀರ್ಮಾನಕ್ಕೆ ಬಂದರೆ ಸಾಧುವಾದುದಲ್ಲ. ಈ ಸಂದರ್ಭದಲ್ಲಿ ಇವತ್ತು ಈ ಚರ್ಚೆಗೆ ಕಾಲ ನಿಗದಿಪಡಿಸಿ. ಏತಕ್ಕೆಂದರೆ, ಇದು ಪ್ರಾಮುಖ್ಯವಾದ ವಿಚಾರವಾಗಿದೆ. ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿದ್ದು. ಇದರಲ್ಲಿ ೧೦೦ ಕೋಟಿ ರೂಪಾಯಿಗಳು ಹೋಗಿದೆ, ಸಾವಿರಾರು ಕೋಟಿ ರೂಪಾಯಿಗಳು ಹೋಗಿದೆ ಎನ್ನತಕ್ಕಂಥದ್ದು ರಾಜ್ಯದ ಜನರಿಗೆ ತಿಳಿಯಬೇಕು, ನಾವು ತಿಳಿದುಕೊಳ್ಳಬೇಕಾದ ಪ್ರಮುಖವಾದ ವಿಚಾರವಾಗಿರುವುದರಿಂದ ತಾವು ದಯವಿಟ್ಟು ಚರ್ಚೆಗೆ ಕಾಲವನ್ನು ನಿಗದಿಪಡಿಸಿ, ಆ ರೀತಿ ನಿಗದಿಪಡಿಸಿದ ಅವಧಿಯಲ್ಲಿ ಸರ್ಕಾರ ಏನಾದರೂ ನ್ಯಾ॥ ಕುಲದೀಪ್ ಸಿಂಗ್ ಆಯೋಗದ ವರದಿಯನ್ನು ತರಿಸಿ ನಮ್ಮೆಲ್ಲರಿಗೂ ಕೊಟ್ಟರೆ ಬಹಳ ಸಂತೋಷ. ಒಂದು ವೇಳೆ ಸರ್ಕಾರಕ್ಕೆ ವರದಿಯನ್ನು ತರಿಸಲಿಕ್ಕೆ ಸಾಧ್ಯವಾಗಲಿಲ್ಲವೆಂದರೆ ಪತ್ರಿಕೆಗಳಲ್ಲಿ ಸಾಕಷ್ಟು ವಿಚಾರ ಬಂದಿದೆ ವರದಿಯ ರೆಕಮೆಂಡೇಟರಿ ಪೋರ್ಷನ್‌ನಲ್ಲಿ ಏನಿದೆ, ಪ್ರಮುಖವಾದ ಅಂಶವೇನಿದೆ ಅದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಅದರ ಆಧಾರದ ಮೇಲೆ ಚರ್ಚೆ ಮಾಡಿದರೂ ಕೂಡ ಅಪ್ರಕೃತವಾಗುವುದಿಲ್ಲ. ಏತಕ್ಕೆಂದರೆ, ಇಂತಹ ಉದಾಹರಣೆಗಳು ಸಾಕಷ್ಟು ಇದೆ ಎನ್ನುವ ಮಾತನ್ನು ತಮ್ಮಲ್ಲಿ ನಾನು ನಿವೇದಿಸಿಕೊಳ್ಳುತ್ತೇನೆ.

MR. SPEAKER.—Mr. Byre Gowda, I quoted the Times of India, "The Kuldip Singh Commission Report was placed in the Parliament Library to-day making it a public document." We stand at that point of time. ಅವರು ಪಬ್ಲಿಕ್ ಡಾಕ್ಯುಮೆಂಟ್ ಎಂದು ಅದನ್ನು ಪಾರ್ಲಿಮೆಂಟ್ ಲೈಬ್ರರಿಯಲ್ಲಿಟ್ಟು ೨೪ ಗಂಟೆಯಾಗಿದೆ. When a document is made public and it is eradily available it is only a question of time before, you and land Government get hold of public document. I can understand

the urgency. I cannot understand.... . ಜರೂರಾಗಿ ಇಷ್ಟೇ ಸಾಕು. ಇದರ ಮೇಲೆ ಚರ್ಚೆ ಮಾಡಿಬಿಡೋಣ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಇನ್ನು ಒಂದೆರಡು ದಿವಸಗಳಲ್ಲಿಯೇ ಸದನ ಮುಕ್ತಾಯವಾಗುವುದಿದೆ. ಸದನ ಮುಕ್ತಾಯವಾದ ಮೇಲೆ ನಾವು ಚರ್ಚೆ ಮಾಡುವುದೆಲ್ಲಿ? ಆಗ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಪಾರ್ಲಿಮೆಂಟರಿ ಪದ್ಧತಿಯ ಪ್ರಕಾರ ತಾವು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರ ಅಧಿಕೃತವಲ್ಲವೆಂದು ಹೇಳಿದರೂ ಕೂಡ ಅದೇ ಆಧಾರದ ಮೇಲೆ ಚರ್ಚೆ ಮಾಡುವುದು ಸರಿಯಲ್ಲವೆಂದು ಹೇಳಿದಿರಿ.

ಅಧ್ಯಕ್ಷರು.—ನಾನು ಹೇಳಲಿಲ್ಲ. Let me not be misquoted. I only said that when a document is readily available, which has been made public by the Government of India, why do you want to rush to raise a discussion without having that document.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ೧೬ನೇ ತಾರೀಖು ಈ ಅಧಿವೇಶನ ಮುಗಿಯುತ್ತದೆ. ಆದ್ದರಿಂದ ಸಭೆಯ ಮುಂದೆ ತಾವು ಅದರ ಪ್ರತಿಗಳನ್ನು ತರಿಸಿ. ಸಭೆಯನ್ನು ಒಂದು ವಾರ ಅಥವಾ ಮೂರು ದಿವಸಗಳು ಮುಂದಕ್ಕೆ ಹಾಕಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ೧೬ನೇ ತಾರೀಖು ಸಭೆಯು ಮುಗಿಯುವುದಾದರೆ ವರದಿ ಬಂದಿರುತ್ತದೆಂದು ಹೇಳಿದರೆ ನಾವು ಚರ್ಚೆ ಯಾವಾಗ ಮಾಡಬೇಕು? ಮತ್ತೆ ಸಭೆ ಸೇರಬೇಕಾದರೆ ೪–೫ ತಿಂಗಳಾಗುತ್ತದೆ. ಅದರೊಳಗೆ ಮಾನ್ಯ ಮುಖ್ಯಮಂತ್ರಿಗಳಿಗೆ ವರದಿ ಬಂದಿದ್ದರೆ ಅದನ್ನು ತರಿಸಿ.

ಶ್ರೀ ಕೆ. ಲಕ್ಕಪ್ಪ.—ಅದಕ್ಕಿಂತ ಹೆಚ್ಚಾಗಿ ಅಧಿಕೃತವಾಗಿರತಕ್ಕಂಥ ದೂರದರ್ಶನ ಮತ್ತು ರೇಡಿಯೋದಲ್ಲಿ ಕೂಡ ಅದು ಪ್ರಸ್ತಾಪ ಆಗಿದೆ.

ಅಧ್ಯಕ್ಷರು.—ಯಾರಿಗೆ ಅಧಿಕೃತ ಅದು.

ಶ್ರೀ ಕೆ. ಲಕ್ಕಪ್ಪ.—ಸರ್ಕಾರಿ ವಲಯದಲ್ಲಿ ನಡೆದಿದೆ. ಅದನ್ನು ನೀವೂ ಕೂಡ ಅಲ್ಲಗಳೆಯುವಂತಿಲ್ಲ, ನಾವು ಕೂಡ ಅಲ್ಲಗಳೆಯುವಂತಿಲ್ಲ.

ಅಧ್ಯಕ್ಷರು.—ಅಧಿಕೃತ ದೂರದರ್ಶನದಲ್ಲಿ ಮುಖ್ಯಮಂತ್ರಿಗಳು ಅಮೇರಿಕಾಕ್ಕೆ ಹೋಗುತ್ತಾರೆ ಎಂದು ಬಂದಿತ್ತು. ಮುಖ್ಯಮಂತ್ರಿಗಳಿಗೆ ಕಾಯಿಲೆಯಾಗಿದೆ ಅವರು ೨೭ನೇ ತಾರೀಖು ಅಮೇರಿಕಾಕ್ಕೆ ಹೋಗುತ್ತಾರೆಂದು ಅಧಿಕೃತವಾಗಿ ದೂರದರ್ಶನದಲ್ಲಿ ಹೇಳಿದರು.

ಶ್ರೀ ಕೆ. ಲಕ್ಕಪ್ಪ.—ಸುಳ್ಳು ವದಂತಿ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ನ್ಯಾ|| ಕುಲದೀಪ್‌ಸಿಂಗ್ ರವರ ರಿಪೋರ್ಟ್ ಇಟ್ಟಿದ್ದಾರೆ ಎಂದು ಎಲ್ಲ ಪತ್ರಿಕೆಗಳಲ್ಲೂ ಬಂದಿದೆ.

ಅಧ್ಯಕ್ಷರು.—ಅಧಿಕೃತ ದಾಖಲೆ ಅವೆಲಬಲ್ ಇರುವಾಗ ಸುಮ್ಮನೆ ಇತರೆ ಅನಧಿಕೃತ ದಾಖಲೆಗಳನ್ನು ಇಡುತ್ತೀರಿ.

೧೧–೨೦ ಎ. ಎಂ.

ಶ್ರೀ ವಾಟಾಳ್ ನಾಗರಾಜ್.—ತಾವು ಸಮಯ ಹೇಳಿ, ಈ ವಿಚಾರವನ್ನು ಚರ್ಚೆ ಮಾಡಬೇಕು.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮುಖ್ಯಮಂತ್ರಿಗಳು ಈಗ ನಮ್ಮ ಕಮೀಷನರ್‌ಗೆ ಟೆಲಿಫೋನ್ ಮಾಡಿ ಪಾರ್ಲಿಮೆಂಟ್ ಹೌಸ್‌ನಲ್ಲಿ ಏನು ಡಾಕ್ಯುಮೆಂಟ್ ಇಟ್ಟಿದ್ದಾರೆ ಅದರ ಕಾಪಿಯನ್ನು ತರಿಸಿ ಈ ದಿವಸ ಅಥವಾ ನಾಳೆ ಚರ್ಚೆ ಮಾಡಿ ಈ ಬಗ್ಗೆ ಒಂದು ಸರಿಯಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಜಿ. ರಾಜೂಗೌಡ.—ಮೊನ್ನೆ ಈ ಸದನದಲ್ಲಿ ರಾಜ್ಯಸಭೆಯಲ್ಲಿ ಮಂಡಿಸಿರತಕ್ಕ ವರದಿ ಬಗ್ಗೆ ಚರ್ಚೆ ಮಾಡಿದೆವು. ಆ ವರದಿ ಈಗ ನಮ್ಮ ಮುಂದೆ ಇದೆಯೆ? ಇವತ್ತು ಕುಲದೀಪ್ ಸಿಂಗ್ ಆಯೋಗದ ವರದಿ ಸಾರ್ವಜನಿಕವಾಗಿ ಬಿಡುಗಡೆಯಾಗಿದೆ. ಆರೋಪಿ ಈ ಮನೆಯ ಸದಸ್ಯರಾಗಿರುವುದರಿಂದ ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ. ಈಗ ಅದು ಅಧಿಕೃತವಾಗಿ ಬಂದಿದೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾನು ಮಾತನಾಡುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಾಕಷ್ಟು ವಿಷಯಗಳನ್ನು ತಿಳಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಯಾವುದೋ ರಾಜ್ಯದ ಭೂಮಿ ಹೋಯಿತು ಎಂದರೆ ಅದು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಜರೂರು ವಿಷಯ ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ಸದನದ ಸದಸ್ಯರಾದ ಮಾಜಿ ಮುಖ್ಯಮಂತ್ರಿಗಳು ೧೧೦ ಎಕರೆ ಭೂಮಿಯನ್ನು ಪಾಶ್ಚಾತ್ಯ ದೇಶಕ್ಕೆ ಕಳುಹಿಸುತ್ತೇವೆಂದು ಹೇಳಿರುವ ವಿಚಾರದ ಬಗ್ಗೆ ಆರೋಪ ಸಾಬೀತಾಗಿರುವ ಕಾಲದಲ್ಲಿ ಈ ಸದನ ಎಷ್ಟು ದಿನ ಕಾಳಿತುಕೊಳ್ಳುತ್ತದೆ, ಯಾವಾಗ ಚರ್ಚೆಗೆ ಅವಕಾಶ ಕೊಡುತ್ತೀರಿ? ಮಾನ್ಯ ಮುಖ್ಯ ಮಂತ್ರಿಗಳು ಒಂದೇ ದಿನದಲ್ಲಿ ಆ ರಿಪೋರ್ಟನ್ನು ತರಿಸಬಹುದು, ನಮಗೆಲ್ಲ ಜೆರಾಕ್ಸ್ ಮಾಡಿಸಿ ಅದರ ಕಾಪಿ ಕೊಡಬಹುದು. ಈ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದನ್ನು ಮುಂದಕ್ಕೆ ಹಾಕಿದರೆ ಇದರ ಪ್ರಾಮುಖ್ಯತೆ ಹೊರಟುಹೋಗುತ್ತದೆ. ಭೂ ಹಗರಣ ಸರ್ಕಾರದ ಹೆಸರಿನಲ್ಲಿ ದುರುಪಯೋಗವಾಗುತ್ತದೆ, ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ಬೋಫರ್ಸ್ ಬಗ್ಗೆ ಕೇಂದ್ರದಲ್ಲಿ ಎಷ್ಟು ಪ್ರಮುಖವಾಗಿ ಚರ್ಚೆ ನಡೆದಿದೆ ಅಷ್ಟೇ ಪ್ರಮುಖವಾಗಿ ಇಲ್ಲಿ ಇದರ ಬಗ್ಗೆ ಚರ್ಚೆ ನಡೆಯಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಬೋಫರ್ಸ್ ಹಗರಣ ಏನು ಬಂದುಹೋಗಿದೆ, ಅದು ಇನ್ನೂ ಮುಗಿದಿಲ್ಲ. ಅಷ್ಟೇ ಪ್ರಮುಖವಾದ ಈ ಭೂಹಗರಣದ ವಿಚಾರವು ಚರ್ಚೆಗೆ ಬರಲಿ.

MR. SPEAKER.—Professor, you will have to learn with this. I fully sympathise with you.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೆ, ತಾವು ಈ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ನನಗೆ ಗೊತ್ತಿದೆ. ಕುಲದೀಪ ಸಿಂಗ್ ವರದಿ ನಮ್ಮ ಕೈಯಲ್ಲಿ ಇಲ್ಲದೆ ನಾವು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಈ ಸಭೆಯಲ್ಲಿ ನನ್ನ ನಡವಳಿಕೆ ಹೇಗೆ ಇರಬೇಕೆಂದು ನಾನು ಜವಾಬ್ದಾರಿಯುತವಾಗಿ ಆಲೋಚನೆ ಮಾಡುವವನು. ನಾನು ಆ ವರದಿ ಇಲ್ಲದೆ ಚರ್ಚೆಯಲ್ಲಿ ಭಾಗವಹಿಸುವವನಲ್ಲ. ಮಾನ್ಯ ಸಭಾಧ್ಯಕ್ಷರು ಇವತ್ತು ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂಬುದು ನನಗೆ ಗೊತ್ತಿದೆ. ಅದು ಬೇರೆ ವಿಷಯ. ಆದರೆ ತಮ್ಮಲ್ಲಿ ಒಂದು ವಿನಂತಿಸುತ್ತೇನೆ, ಎರಡು ದಿನ ಈ ಮನೆಯಲ್ಲಿ ಟೆಲಿಫೋನ್ ಕದ್ದಾಲಿಕೆ ಬಗ್ಗೆ ಮಾತನಾಡಿದೆವು, ಅದು ಕೇವಲ ಮನರಂಜನಾ ಕಾರ್ಯಕ್ರಮವಾಯಿತು. ಅದರ ಮುಂದಕ್ಕೆ ಏನು ತಾರ್ಕಿಕವಾಗಿ ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಲಿಲ್ಲ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ, ತಾವು ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವವರು, ಅವರ ಪಾತ್ರವೂ ಇದರಲ್ಲಿ ಇದೆ. ಚರ್ಚೆಯ ನಂತರ ಹಾವುಗಳು ಸಾಯಬೇಕು, ಇಲ್ಲದಿದ್ದರೆ ಕೋಲುಗಳು ಮುರಿಯಬೇಕು. ಇಂತಹ ಒಂದು ಆಶ್ವಾಸನೆ ನಮ್ಮ ಮುಖ್ಯಮಂತ್ರಿಗಳು ಕೊಟ್ಟರೆ ಅವರ ಕೋಲೂ ಮುರಿಯಬೇಕು, ಇಲ್ಲವೇ ಹಾವೂ ಸಾಯಬೇಕು. ಏನೂ ಇಲ್ಲದೇ ಸುಮ್ಮನೆ ಮನೋರಂಜನೆಯ ಕಾರ್ಯಕ್ರಮವಾದರೆ ದಯವಿಟ್ಟು ಈ ಚರ್ಚೆಗೆ ತಾವು ಕಾಲಾವಕಾಶ ಮಾಡಿಕೊಡಬಾರದು.

ಅಧ್ಯಕ್ಷರು.—ಇಲ್ಲಿ ಹಾವೂ ಸತ್ತಿದೆ, ಕೋಲೂ ಮುರಿದಿದೆ.

ಶ್ರೀ ಎ. ಕೆ. ಅನಂತಕೃಷ್ಣ.—ಅಧ್ಯಕ್ಷರೇ, ಜಸ್ಟೀಸ್ ಕುಲ್‌ದೀಪ್ ಸಿಂಗ್ ಅವರ ವರದಿ ಸಂಪೂರ್ಣವಾಗಿ ನಮ್ಮ ಕೈಯಲ್ಲಿ ಇಲ್ಲ. ಅದು ಕೈಯಲ್ಲಿ ಇಲ್ಲದೇ ನಾವು ಚರ್ಚೆ ಮಾಡಿದರೆ ಅದು ಕೇವಲ ತಾತ್ಕಾಲಿಕವಾಗಿ ನಮ್ಮ ಮನಸ್ಸಿಗೆ ತೃಪ್ತಿ ಆಗುವ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಆಗುತ್ತದೆಯಷ್ಟೇ, ಒಂದು ಚಟ ಆಗುತ್ತದೆಯಷ್ಟೆ.

ಶ್ರೀ ಗೋಪೀನಾಥ ಆರ್. ಸಾಂದ್ರ.—ಚಟ ಎನ್ನುವ ಪದ ಇಲ್ಲಿ ಬಳಸುವುದು ಸೂಕ್ತವಲ್ಲವೆಂದು ನನ್ನ ಭಾವನೆ.

ಶ್ರೀ ಎ. ಕೆ. ಅನಂತಕೃಷ್ಣ. ನಾನು ಹೇಳುವುದನ್ನು ಹೇಳುತ್ತೇನೆ. ಅದು ಸರಿಯಲ್ಲವೆಂದು ಕಂಡರೆ ಅದನ್ನು ಅಧ್ಯಕ್ಷರು ಕಿತ್ತುಹಾಕಬಹುದು.

ಅಧ್ಯಕ್ಷರು.—ಚಟ ಎನ್ನುವುದು ಪಾರ್ಲಿಮೆಂಟರಿ ವರ್ಡ್, ತಾವು ಮುಂದುವರಿಸಿ.

ಶ್ರೀ ಎ. ಕೆ. ಅನಂತಕೃಷ್ಣ.—ಅದು ತಪ್ಪು ಇದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನಾನು ಇದನ್ನು ಯಾರ ಮನಸ್ಸನ್ನೂ ನೋಯಿಸುವುದಕ್ಕೆ ಹೇಳುತ್ತಾ ಇಲ್ಲ. ಇಲ್ಲಿ ಮುಖ್ಯ ಪ್ರಶ್ನೆ ಏನೆಂದರೆ, ಇಲ್ಲಿ ಕೇವಲ ರಾಜಕಾರಣದ ಒಂದೇ ವಿಷಯ ಅಲ್ಲ, ಅಥವಾ ಒಬ್ಬ ರಾಜಕೀಯ ವ್ಯಕ್ತಿಯ ವಿಷಯವಲ್ಲ. ಇದು ನಮ್ಮ ಆಡಳಿತದ ಒಂದು ವಿಷಯವಾಗಿದೆ. ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಈ ರೀತಿ ನಡೆಯಬಾರದು ಎಂಬ ಉದ್ದೇಶದಿಂದ ಚರ್ಚೆ ಮಾಡಬೇಕಾದುದು ಬಹಳ ಮುಖ್ಯ. ಇದರಲ್ಲಿ ಹೆಚ್.ಜಿ.ವಿ. ರೆಡ್ಡಿಯವರು, ಅಲ್ಲಿ ಛೇರ್ಮನ್ ಆಗಿದ್ದವರು ಇದ್ದಾರೆ. ಅವರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಇದರಲ್ಲಿ ಲೋಖಂಡವಾಲಾ, ನಿಜಲಿಂಗಪ್ಪನವರ ಇನ್‌ವಾಲ್ವ್ ಆಗಿದ್ದಾರೆ. ಇನ್ನೂ ಸಾಕಷ್ಟು ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ. ಇದು ಕೇವಲ ಅಂದಿನ ಮುಖ್ಯಮಂತ್ರಿಗಳ ಪ್ರಶ್ನೆ ಅಲ್ಲ, ಅಂದಿನ ಬಿಡಿಎಗೆ ಸಂಬಂಧಪಟ್ಟ ಮಂತ್ರಿಗಳೂ ಕೂಡಾ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಇದನ್ನು ನಾನಾ ದೃಷ್ಟಿಯಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಈ ಬಗ್ಗೆ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಮಾನ್ಯ ನಂಜುಂಡಸ್ವಾಮಿಯವರು ಹೇಳಿದ ಹಾಗೆ, ಈ ಬಗ್ಗೆ ಪರಿಪೂರ್ಣವಾಗಿ ಚರ್ಚೆಯಾಗಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾರು ಯಾರು ರಾಜಕಾರಣಿಗಳು ಇದರಲ್ಲಿ ತಪ್ಪಿತಸ್ಥರಾಗಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಯಾವ ಯಾವ ಭಾಗದಲ್ಲಿ ಯಾರು ಯಾರು ಅನ್ಯಾಯ ಮಾಡಿದ್ದಾರೆಂಬುದರ ಬಗ್ಗೆ ಚರ್ಚೆ ಮಾಡಬೇಕಾಗಿರುವುದರಿಂದ, ಪರಿಪೂರ್ಣ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊರಿಯರ್ ಸರ್ವೀಸ್ ಮುಖಾಂತರವಾದರೂ ಬೇಗನೆ ತರಿಸಿಕೊಳ್ಳಲಿ. ಅದನ್ನು ತರಿಸುವುದಕ್ಕೆ ಅವರಿಗೆ ಕಷ್ಟವಾಗುವುದಿಲ್ಲ. ಅನಂತರ ಇದನ್ನು ಚರ್ಚೆ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಕೆಲವು ಗೆಳೆಯರೂ ಕೂಡಾ ಚರ್ಚೆಯಾಗಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಆದರೆ ರಿಪೋರ್ಟ್ ಬಂದಿಲ್ಲ ಎಂದು ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ ಅದು ಪೋಸ್ಟ್‌ಪೋನ್ ಆಗುತ್ತಾ ಇದೆ. ಆದರೆ ಈಗಾಗಲೇ ಪತ್ರಿಕೆಗಳಲ್ಲಿ ಈ ವಿಷಯ ಬಂದಿರತಕ್ಕದ್ದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ, ಮತ್ತು ನಾವೆಲ್ಲರೂ ಪತ್ರಿಕೆಗಳನ್ನು ನೋಡಿದ್ದೇವೆ. ಇವತ್ತು ನಾವು ಈ ವಿಷಯವನ್ನು ರೈಸ್ ಮಾಡುತ್ತಿದ್ದೇವೆ ಎನ್ನುವ ಪ್ರಶ್ನೆ ಅಲ್ಲ. ಈ ಸದನದಲ್ಲಿ ಹೋದ ಸಲ ನಾವು ಆ ಕಡೆ ಕುಳಿತಿದ್ದಾಗ ಈ ಭೂ ಹಗರಣದ ವಿಚಾರ ಬಂದಾಗ ಜನರಿಗೆ ಎತ್ತಿ ತೋರಿಸತಕ್ಕ ಕೆಲಸ ಮಾಡಿದ್ದೇನೆ ಮತ್ತು ಯಾವ ರೀತಿಯಾಗಿ ಕಾನೂನನ್ನು ಉಲ್ಲಂಘನೆ ಮಾಡಿ ಸುಮಾರು ೧೧೦ ಎಕರೆ ಜಮೀನನ್ನು ಎನ್‌ಆರ್‌ಐ ಅಸೋಸಿಯೇಷನ್ನಿಗೆ ಕೊಟ್ಟರು ಎಂದು ಆಗಲೇ ಹೇಳಿದ್ದೇವೆ. ಈಗ ಹೇಳತಕ್ಕದ್ದು ಅಲ್ಲ. ನಾವು ಯಾವಾಗ ಈ ಪ್ರಶ್ನೆಯನ್ನು ಎತ್ತಿದ್ದೆವೋ ಆ ಕಾಲದಲ್ಲಿ ಆಗಿನ ಮುಖ್ಯಮಂತ್ರಿಗಳು ಇದರಲ್ಲಿ ನನ್ನ ಇನ್‌ವಾಲ್ವ್‌ಮೆಂಟ್ ಇಲ್ಲ. ನಾನು ಆ ಮೀಟಿಂಗ್‌ನಲ್ಲಿ ಪ್ರಿಸೈಡ್ ಮಾಡಿಲ್ಲ ಎಂದಾಗ, ನಮ್ಮಲ್ಲಿದ್ದ ಎಲ್ಲಾ ಡಾಕ್ಯುಮೆಂಟ್‌ನ್ನು ಆಗಲೇ ಒದಗಿಸಿ ಕೊಟ್ಟಿದ್ದೇವೆ. ಅದರ ಆಧಾರದ ಮೇಲೆ ನ್ಯಾಯಾಂಗ ವಿಚಾರಣೆ ಆಗಿದೆ. ಅವರೂ ಕೂಡ ನಾವು ಏನು ಅಪಾದನೆ ಮಾಡಿದ್ದೆವು. ಅದನ್ನೇ ಪುಷ್ಟೀಕರಿಸಿದ್ದಾರೆ. ಅವರೂ ಕೂಡ ಅದನ್ನೇ ಹೇಳಿದ್ದಾರೆ. ನಾವು ಯಾವ ಆಧಾರದ ಮೇಲೆ ಅವತ್ತಿನ ದಿವಸ ಆಲಿಗೇಷನ್ ಮಾಡಿದೆವು ಅಂದರೆ, ಲೆಟರ್‌ನ್ನು ಪ್ರೊಡ್ಯೂಸ್ ಮಾಡಿದೆವು ಮತ್ತು ಪ್ರೊಸೀಡಿಂಗ್ಸ್ ಕಾಪಿಯನ್ನು ಪ್ರೊಡ್ಯೂಸ್ ಮಾಡಿದೆವು. ಅವರು ಯಾವ ಮೀಟಿಂಗ್‌ನ್ನು ಅಟೆಂಡ್ ಮಾಡಿದರು ಅದನ್ನೂ ಕೂಡ ಹೇಳಿದ್ದೆವು. ಮತ್ತು ಅವರು ಯಾವ ರೀತಿ ಅದನ್ನು ನಿರಾಕರಣೆ ಮಾಡಿದರು, ಆಮೇಲೆ ಪರದೇಶಕ್ಕೆ ಹೋದಾಗ ಯಾವ ರೀತಿಯ ಬ್ರೋಚರ್‌ಗಳನ್ನು ತೆಗೆದುಕೊಂಡು ಅವರು ಪ್ರಚಾರ ಮಾಡಿದರು.

ಅಧ್ಯಕ್ಷರು.—ಈಗ ಚರ್ಚೆಯನ್ನೇ ಶುರು ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ. ಈಗ ಶ್ರೀಮಾನ್ ನಜುಂಡ ಸ್ವಾಮಿಯವರು ಈ ವಿಷಯವನ್ನು ಮನೋರಂಜನೆಗಾಗಿ ಎತ್ತುವುದು ಬೇಡ ಅಂತ ಹೇಳಿದರು. ಇದರಲ್ಲಿ ಸುಮಾರು ೧೧೦

ಕೋಟಿ ರೂಪಾಯಿಗಳ ವ್ಯವಹಾರ ಇದೆ ಮತ್ತು ಈ ದೇಶದ ಆಸ್ತಿ ಇದೆ. ನೀವು ಯಾವಾಗಲೂ ಆಸ್ತಿ ಆಸ್ತಿ ಅಂತ ಹೇಳುತ್ತಿದ್ದೀರಲ್ಲಾ, ನೂರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಕೆಲವೇ ಜನರಿಗೆ ಅಂದರೆ ಲೋಪಿ ಹಮಾಲಿ ಎನ್ನತಕ್ಕವರಿಗೆ ಮಾಡಿಕೊಡತಕ್ಕ ಏನೊಂದು ಅಪ್ರಮಾಣಿಕ ಪ್ರಯತ್ನವನ್ನು ಅವರು ಮಾಡಿದರು. ಅದನ್ನು ಅಂದೇ ಬಯಲಿಗೆ ಇಟ್ಟಿದ್ದೇವೆ. ಈ ರೀತಿ ಇಟ್ಟಾಗ ನಮಗೆ ಎಷ್ಟು ತೊಂದರೆ ಕೊಟ್ಟರು ಎಂಬುದು ಬಹುಶಃ ಕೆಲವೇ ಜನರಿಗೆ ಗೊತ್ತಿರಬಹುದು. ಆದಕ್ಕಾಗಿ ಈ ಆಸ್ತಿಯನ್ನು ಉಳಿಸಬೇಕು, ಜನತೆಯ ಆಸ್ತಿ ಉಳಿಸಿಕೊಳ್ಳಬೇಕು ಎನ್ನತಕ್ಕಂತಹ ದೃಷ್ಟಿಯಿಂದ ನಾವು ಅವತ್ತು ಈ ಪ್ರಶ್ನೆಯನ್ನು ಎತ್ತಿದಾಗ ಎಷ್ಟು ತೊಂದರೆಯಾಯಿತೆಂಬುದು ನಮಗೆ ಗೊತ್ತು. ಬಹುಶಃ ಬೇರೆ ಸದಸ್ಯರಿಗೆ ಗೊತ್ತಿರಲಿಕ್ಕಿಲ್ಲ. ಆದ್ದರಿಂದ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ. ಕುಲದೀಪ್‌ಸಿಂಗ್‌ರವರು ವರದಿಯನ್ನು ಏನು ಕೊಟ್ಟಿದ್ದಾರೆ, ಆ ವರದಿಯ ಮೇಲೆ ಚರ್ಚೆ ಮಾಡುವುದಷ್ಟೇ ಅಲ್ಲ, ಹಿಂದೆ ನಾವು ಏನು ಡಾಕ್ಯುಮೆಂಟ್ಸ್ ಕೊಟ್ಟಿದ್ದೇವೆ ಅದು ಕೂಡ ಸದನದ ಮುಂದೆ ಇದೆ. ಮತ್ತೆ ಇದರ ರೆಕಮೆಂಡೇಷನ್ ಬಂದ ಮೇಲೆ ಸರ್ಕಾರ they have to initiate the proceedings......ಅವರನ್ನು ಪ್ರಾಸಿಕ್ಯೂಷನ್ ಆದರೂ ಮಾಡಲಿ, ಇಲ್ಲವೇ ಅವರ ಮೇಲೆ ಕೇಸ್ ರಿಜಿಸ್ಟರ್ ಆದರೂ ಮಾಡಿಕೊಳ್ಳಲಿ. ಅದನ್ನು ಅವರು ಪ್ರಾರಂಭ ಮಾಡಬೇಕಾಗುತ್ತದೆ. ಈಗಲೆ. ಕೇಂದ್ರ ಸರ್ಕಾರಕ್ಕೆ ಬರೆದು ತಕ್ಷಣ. ನಾಳೆಯೋ ವರದಿಯನ್ನು ತೆಗೆದುಕೊಂಡು ಬರುವುದಕ್ಕಾಗುತ್ತದೆ, ನೆಕ್ಸ್ಟ್ ಫ್ಲೈಟಿಗೆ ಬರುತ್ತದೆ. ಬಂದ ತಕ್ಷಣ ಅದರ ಸೈಕ್ಲೋಸ್ಟೈಲ್ ಕಾಪಿಯನ್ನು ಎಲ್ಲ ಸದಸ್ಯರಿಗೂ ಕೊಟ್ಟರೂ ಕೂಡ ನಾಳೆಯೋ ಅಥವಾ ನಾಡಿದ್ದೋ ಸಮಯವನ್ನು ನಿಗದಿ ಮಾಡಿ, ಒಂದೆರಡು ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೋಟ್ಯಾಂತರ ರೂಪಾಯಿಗಳ ಆಸ್ತಿ ರಾಜ್ಯಕ್ಕೆ ಉಳಿಯುತ್ತದೆ. ಆದ್ದರಿಂದ ದಯಮಾಡಿ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.---ಮಾನ್ಯ ಸಭಾಧ್ಯಕ್ಷರೆ, ಕುಲದೀಪ್‌ಸಿಂಗ್ ಆಯೋಗದ ವರದಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ ಸುದ್ದಿ ನಮಗೆ ತಿಳಿದ ತಕ್ಷಣ ನಮ್ಮ ಚೀಫ್ ಸೆಕ್ರೆಟರಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಅದರ ಒಂದು ಪ್ರತಿಯನ್ನು ನಮಗೆ ಕಳುಹಿಸಿ ಕೊಡಬೇಕೆಂದು ವಿನಂತಿ ಮಾಡಿಕೊಂಡರು. ಆ ಪತ್ರದ ಜೊತೆಯಲ್ಲೇ ದೆಹಲಿಯಲ್ಲಿರುವ ನಮ್ಮ ರೆಸಿಡೆಂಟ್ ಕಮಿಷನರ್ ರವರನ್ನು ಕೂಡ ದೂರವಾಣಿಯ ಮೂಲಕ ಸಂಪರ್ಕ ಮಾಡಿ ಈ ರೀತಿಯಾಗಿ ನಾನು ಪತ್ರ ಬರೆದಿದ್ದೇನೆ, ತಾವು ಅವರಲ್ಲಿಗೆ ಹೋಗಿ ಅದರ ಪ್ರತಿಯನ್ನು ಪಡೆದು ತಕ್ಷಣ ಬೆಂಗಳೂರಿಗೆ ಕಳುಹಿಸಿಕೊಡಬೇಕು ಎನ್ನುವಂತಹ ವಿಚಾರವನ್ನೂ ಕೂಡ ಅವರು ಹೇಳಿದರು. ಆದರೆ ಆಗ ನಮ್ಮ ರೆಸಿಡೆಂಟ್ ಕಮಿಷನರ್ ಸಂಬಂಧಪಟ್ಟಂತಹ ಕೇಂದ್ರ ಸರ್ಕಾರದ ಅಧಿಕಾರಿಯನ್ನು ಸಂಪರ್ಕಿಸಿದಾಗ, ಅವರು ಹೇಳಿದರು, ಮೊನ್ನೆ ಮೊನ್ನೆ ನಮಗೆ ವರದಿ ಬಂದಿದೆ, ಆ ವರದಿ ಇನ್ನೂ ಪರಿಶೀಲನೆಯಲ್ಲಿದೆ, ಪರಿಶೀಲಿಸಿದ ನಂತರ ಆ ವರದಿಯ ಮೇಲೆ ನಾವು ಏನಾದರೂ ಒಂದು ಆಕ್ಷನ್ ತೆಗೆದುಕೊಂಡ ಮೇಲೆ ಅದರ ಒಂದು ಪ್ರತಿಯನ್ನು ನಿಮಗೆ ಕೊಡುವಂತಹ ಪ್ರಶ್ನೆ ಉದ್ಭವವಾಗುತ್ತದೆ, ಅದಕ್ಕಿಂತ ಮೊದಲು ಉದ್ಭವವಾಗುವ ಹಾಗೆ ಇಲ್ಲ ಎನ್ನುವ ಮಾತನ್ನು ಅವರು ಹೇಳಿದರು. ಇದು ಆದ ಮೇಲೆ ಎಲ್ಲರಿಗೂ ಗೊತ್ತಿರುವ ಹಾಗೆ, ನಿನ್ನೆ ಆಯೋಗದ ವರದಿಯನ್ನು ಪಾರ್ಲಿಮೆಂಟ್‌ನ ಲೈಬ್ರರಿಯಲ್ಲಿ ಕೇಂದ್ರ ಸರ್ಕಾರ ಇಟ್ಟಿದೆ. ಇವತ್ತು ಅದು ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ. ಆದಕ್ಕಾಗಿ ಈಗಾಗಲೇ ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ನಮ್ಮ ರೆಸಿಡೆಂಟ್ ಕಮಿಷನರನ್ನು ಟೆಲಿಫೋನ್ ಮೂಲಕ ಸಂಪರ್ಕಮಾಡಿ, ಇದೀಗ ಕೇಂದ್ರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ಅದರ ಪ್ರತಿಯನ್ನು ಪಡೆದು ಸಾಧ್ಯವಾದರೆ ಇವತ್ತು ಸಂಜೆಯೋ ಅಥವಾ ನಾಳೆಯೋ ಬೆಂಗಳೂರಿಗೆ ಕಳುಹಿಸುವಂತಹ ವ್ಯವಸ್ಥೆ ಮಾಡಬೇಕೆಂದು ಅವರಿಗೆ ಹೇಳಬೇಕೆಂದು ನಾನು ಹೇಳಿದ್ದೇನೆ. ಬಹುಶಃ ಅವರು ಈಗಾಗಲೇ ರೆಸಿಡೆಂಟ್ ಕಮಿಷನರ್‌ನ್ನು ಸಂಪರ್ಕಿಸಿರಬಹುದೆಂದು ನನಗನ್ನಿಸುತ್ತದೆ. ಅಲ್ಲಿಂದ ಏನು ಬರುತ್ತದೆ ಎಂಬುದನ್ನು ತಿಳಿದು ಆ ನಂತರ ಹೇಳಬಹುದು. ಇನ್ನು ಎರಡನೇ ಪ್ರಶ್ನೆ ಇದರಲ್ಲಿ ಉದ್ಭವವಾಗುವಂಥದ್ದು ಏನೆಂದರೆ, ಈಗಾಗಲೇ ಕೇಂದ್ರ ಸರ್ಕಾರ ಆ ವರದಿಯನ್ನು ಪಬ್ಲಿಕ್ ಡಾಕ್ಯುಮೆಂಟ್ ಎಂದು ಘೋಷಣೆ ಮಾಡಿ ಪಾರ್ಲಿಮೆಂಟ್ ಲೈಬ್ರರಿಯಲ್ಲಿ ಇಟ್ಟಿದ್ದರೂ ಕೂಡ ಪತ್ರಿಕೆಯಲ್ಲಿ ಆ ವರದಿಯ ಮುಖ್ಯಾಂಶಗಳು ಬಂದಿವೆಯೇ ಹೊರತಾಗಿ ಪೂರ್ತಿ ವರದಿ ವರ್ಬೇಟಮ್ ಆಗಿ ವರದಿಯಾಗಿಲ್ಲ. ಪತ್ರಿಕೆಗಳಲ್ಲಿ ಕೆಲವು ಅಂಶಗಳು ಮಾತ್ರ ಬಂದಾಗ ಅದನ್ನೇ ನಾವು ಆಧಾರವಾಗಿ ಇಟ್ಟುಕೊಂಡು ಇಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲವೆಂದು ನನಗನ್ನಿಸುತ್ತದೆ. ಬಹುಶಃ ಪಬ್ಲಿಕ್ ಡಾಕ್ಯುಮೆಂಟ್ ಎಂದು ಅವರೇ ಘೋಷಣೆ ಮಾಡಿದ ಮೇಲೆ ಅದರ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಕ್ಕೆ ಕೇಂದ್ರ ಸರ್ಕಾರ ಹಿಂದೆ ಮುಂದೆ ನೋಡಲಿಕ್ಕಿಲ್ಲ, ಬಹುಶಃ ಇವತ್ತು ಸಾಯಂಕಾಲದೊಳಗೆ ಒಂದು ಪ್ರತಿ ನಮಗೆ

ಸಿಗಬಹುದು ಎಂಬ ಆಸೆ ಇಟ್ಟುಕೊಂಡಿದ್ದೇನೆ. ಎರಡನೇ ಪ್ರಶ್ನೆ ಉದ್ಭವವಾಗುವಂಥದ್ದು. ಏನೆಂದರೆ, ಈಗ ಅನೇಕ ಮಾನ್ಯ ಸದಸ್ಯರು ಇದರ ಮೇಲೆ ಈ ಸದನದಲ್ಲಿ ಚರ್ಚೆ ಆಗಬೇಕು ಎಂದು ಡಿಮ್ಯಾಂಡ್ ಮಾಡಿದ್ದಾರೆ, ಮಾನ್ಯ ಸಭಾಧ್ಯಕ್ಷರೆ, ಆಯೋಗ ಏನು ವಿಚಾರಣೆ ಮಾಡಿದೆ ಆ ಆಸ್ತಿ ಕರ್ನಾಟಕದ ಆಸ್ತಿ, ಬೆಂಗಳೂರಿನ ಆಸ್ತಿ, ಬೆಂಗಳೂರಿನಲ್ಲಿರುವಂಥ ಆಸ್ತಿ. ಹಗರಣ ನಡೆದದ್ದು ಕರ್ನಾಟಕದಲ್ಲಿ. ಈ ಹಗರಣಕ್ಕೆ ಸಂಬಂಧಪಟ್ಟ ಅನೇಕ ಜನ ಕೂಡ ಕರ್ನಾಟಕದವರೆ. ಇಂಥ ಒಂದು ಪರಿಸ್ಥಿತಿ ಇದ್ದಾಗ ಈ ಒಂದು ವರದಿ ಬಂದ ತಕ್ಷಣ ಅದನ್ನು ತಮ್ಮ ಮುಂದೆ, ಸಭೆಯ ಮುಂದೆ ಇಡುವುದಕ್ಕೆ ಕಾಲಹರಣ ವಾಗದಂತೆ ಇಡುತ್ತೇನೆ. ಇದೀಗ ನಾನು ಹೇಳಿದಹಾಗೆ, ಇದು ನಮ್ಮ ಕರ್ನಾಟಕಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಈ ಹಿನ್ನೆಲೆಯಲ್ಲಿ ಇದರ ಬಗ್ಗೆ ಚರ್ಚೆಗೆ ಅನುಮತಿ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ಮಾನ್ಯ ಸಭಾಧ್ಯಕ್ಷರು ನಿರ್ಣಯ ಮಾಡಬೇಕು. ತಮ್ಮ ನಿರ್ಣಯಕ್ಕೆ ನಾವು ತಲೆಬಾಗುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೇನೆ.

SRI D.B, CHANDRE GOWDA.—It is a matter of propriety. We have the information that the report is presented to the Presiding Officers, in turn the limited question is that it becomes the property of both the Houses of Parliament. It is a normal practice once the report is presented to the Presiding Officers the document is placed in the Library for the public consumption

ಒಬ್ಬ ಮಾನ್ಯ ಸದಸ್ಯರು.—ಪಾರ್ಲಿಮೆಂಟಿನ ಲೈಬ್ರರಿಯಲ್ಲಿ ವರದಿ ಇಟ್ಟಿದ್ದಾರೆಂದು ಪತ್ರಿಕೆ ಯಲ್ಲಿದೆ. ಅದನ್ನು ಓದಿ.

SRI D.B. CHANDRE GOWDA.—My question is this Commission of Enquiry was constituted by the Central Government on the demand made by the House of Parliament if I am correct or otherwise also by the...

SRI VEERENDRA PATIL.—On the demand made by the then Chief Minister Mr. Hegde...

ಶ್ರೀ ಡಿ.ಬಿ. ಚಂದ್ರೇಗೌಡ.—ಅದನ್ನು ನಾನು ಹೇಳುತ್ತೇನೆ ತಮಗೂ ಅಭಿನಂದನೆ ಸಲ್ಲಿಸು ತ್ತೇನೆ. ಏತಕ್ಕೆಂದರೆ, ಮಾನ್ಯ ರಾಮಕೃಷ್ಣ ಹೆಗಡೆಯವರೇ ಕೇಳಿದರು ಎಂಬುದು ಇಲ್ಲಿ ಬಹಳ ಮುಖ್ಯ ವಾದ ಪ್ರಶ್ನೆ. ಜೊತೆಗೆ ಇದನ್ನು ವಿಚಾರಣೆ ಮಾಡಿರತಕ್ಕವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು. ನನ್ನ ಲಿಮಿಟೆಡ್ ಥಿಂಕಿಂಗ್‌ಗೆ ಅನ್ನಿಸುತ್ತದೆ, ಪಾರ್ಲಿಮೆಂಟರಿ ಪ್ರಾಕ್ಟೀಸ ಅನುಭವದ ಮೇಲೆ ಹೇಳುವುದಾದರೆ, whether this can be taken up for discu ssion before Parliament discusses, it is the limited question. I would like to know from the Chair.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರೊಪ್ರೈಟಿ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಯು.ಎನ್.ಐ. ರಿಪೋರ್ಟ್ ಬಂದಿದೆ. I am just quoting for the benefit of the house.

> "Kuldip Singh Commiision Report was placed in the Library today making it a pubilc document. An Official Spokes-man said MPs would now have access to the report. Further. copies are also understood to have been made available to the presiding Officers of both the House."

ಇವರಲ್ಲಿ ಏನು ಅರ್ಥವಾಗುತ್ತದೆಂದು ಹೇಳಿದರೆ, it was placed before and in the custody of the parliament Library by the Government and it was

also...suppose it is presented to the presiding Officers—it means it would have been presented before the Parliament because under the Commission of Enquiry Act...ಇದರಲ್ಲಿ ಈಗ ಒಂದು ಡಿವಿಯೇಷನ್ ಆಗಿರ ಬಹುದು. ಕಮಿಷನ್ ಆಫ್ ಎನ್‌ಕ್ವಾಯರಿ ಆಕ್ಟ್ ಪ್ರಕಾರ ಪಾರ್ಲಿಮೆಂಟ್‌ನವರು ಕಮಿಷನ್ ನೇಮಕ ಮಾಡಿದ್ದರೆ, ಪಾರ್ಲಿಮೆಂಟಿನಲ್ಲಿ ವರದಿಯನ್ನು ಇಡುತ್ತಾರೆ. ರಾಜ್ಯ ಸರ್ಕಾರ ಎನ್‌ಕ್ವಾಯರಿ ಕಮಿಷನ್ ನೇಮಕ ಮಾಡಿದ್ದರೆ ಎನ್‌ಕ್ವಾಯರಿ ಕಮಿಷನ್ ಆಕ್ಟ್ ಪ್ರಕಾರ ಈ ಸದನದಲ್ಲಿ ವರದಿ ಯನ್ನು ಇಡಬೇಕು. ಇದರಲ್ಲಿ ಏನು ಮಾಡಿದ್ದಾರೆಂದರೆ, they have placed it in the parliament Library and they have also given the copies. It is a public document which is available for the benefit of M.Ps, Once it is a public document we are also entitled to have the copies of the report...Here the question of propriety does not arise. It has already became a public document which is available in the Parliament Library. Even the version which is given by the newspaper is official version which is extracted from the report because it was available...ಆದ್ದರಿಂದ ನಾವು ಪತ್ರಿಕೆಯವರನ್ನಾಗಲೀ, ಬೇರೆಯವರನ್ನಾ ಗಲೀ ಮಿಸ್‌ಕೋಟ್ ಮಾಡದಿದ್ದರೆ there is definite version given by the press ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಸರ್ಕಾರ ಆ ವರದಿಯ ಪ್ರತಿಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದರು. ಅವರು ಹೇಳಿದ ಪ್ರಕಾರ it is left to the Hon'ble Speaker to fix a date whether to discuss or not......

ಶ್ರೀ ಡಿ. ಬಿ ಚಂದ್ರೇಗೌಡ.—ನಾನು ಅವರು ಹೇಳಿದ್ದಕ್ಕೆ ವಿರೋಧವಾಗಿ ಹೇಳಲಿಲ್ಲ. ಲಿಮಿಟೆಡ್ ಕೊಶ್ಚನ್ ಅಂದರೆ. ಯಾವುದೇವರದಿಯನ್ನು ಸಭಾಧ್ಯಕ್ಷರಿಗೆ ಅಥವಾ ರಾಜ್ಯಸಭಾ ಅಧ್ಯಕ್ಷರಿಗೆ ಸಮರ್ಪಣೆ ಮಾಡಿದಮೇಲೆ. ಸಂಸತ್‌ನಲ್ಲಿ ಇಟ್ಟಮೇಲೆ normal practice is a copy is placed in the Library also.........ಅದು ತಮಗೂ ಗೊತ್ತಿದೆ. ಅವರಿಗೂಗೊತ್ತಿದೆ ನಮಗಾರಿಗೂ ಗೊತ್ತಿಲ್ಲದೆ ಇರತಕ್ಕ ವಿಚಾರವಲ್ಲ. ನನ್ನ ಪ್ರೊಪ್ರೈಟಿ ಪ್ರಶ್ನೆ ಏನೆಂದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ಚರ್ಚೆಮಾಡುವುದಕ್ಕೆ ಬೇಡವೆಂದು ಹೇಳುತ್ತಿಲ್ಲ, ಅದನ್ನು ಚರ್ಚೆಮಾಡೋಣ. ನನ್ನ ಪ್ರಶ್ನೆ ಏನೆಂದರೆ, ಈಡಾಕ್ಯುಮೆಂಟ್ it is the property of the Parliament Before parliment discusses it whether this Assembly can discuss the report is one question.... ..ಈಗ ಸದನದಲ್ಲಿ ವರದಿಯನ್ನು ಇಡಿ ಇಡಿಯೆಂದು ಹೇಳುವುದು ಒಂದು ಭಾಗ ಇಡುವುದನ್ನು ಯಾರೂ ಬೇಡವೆಂದು ಹೇಳಲಿಲ್ಲ. ರಾಜ್ಯಾಂಗವನ್ನೇ ತಿದ್ದುಪಡಿ ಮಾಡಿ ಇಂತಹ ಸಮಿತಿಗಳ ವರದಿಯನ್ನು ಪಾರ್ಲಿಮೆಂಟ್‌ನಲ್ಲಾಗಲೀ ಶಾಸನಸಭೆಗಳಲ್ಲಾಗಲೀ ಇಡಲೇ ಬೇಕಾಗಿಲ್ಲವೆಂದು ತೀರ್ಮಾನಮಾಡಿದಂತಹ ಕೀರ್ತಿ ಕಾಂಗ್ರೆಸ್‌ನದು. ಠಕ್ಕರ್ ನಟರಾಜ್ ಕಮಿಷನ್ ರಿಪೋರ್ಟ್ ಏನಾಗಿದೆಯೆಂಬ ವಿಚಾರಣೆಗಳಿಗೆ ನಾನು ಹೋಗುವುದಿಲ್ಲ. ಪುನಃ ಸಂವಿಧಾನವನ್ನು.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಓ, ಓಹೋ ...

ಶ್ರೀ ಡಿ. ಬಿ. ಚಂದ್ರೇಗೌಡ.—ಏನು, ಓ, ಓಹೋ ಎಂದು ಹೇಳುತ್ತಿರಲ್ಲಾ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಕುಲದೀಪಸಿಂಗ್ ಆಯೋಗದ ವರದಿ ಬಗ್ಗೆ ಮಾತನಾಡೋಣ. ಆಮೇಲೆ ಠಕ್ಕರ್ ನಟರಾಜ್ ಆಯೋಗದ ಬಗ್ಗೆ ನೋಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ.—ಇಂತಹ ವರದಿಗಳನ್ನು ಶಾಸನಸಭೆಗಳಲ್ಲಿ ಇಡಬೇಕಾಗಿಲ್ಲವೆಂದು ಸಂವಿಧಾನವನ್ನು ತಿದ್ದುಪಡಿ ಮಾಡಿದಂತಹ ಕೀರ್ತಿ ನಿಮ್ಮದು. On the Contrary.........

(ಗೊಂದಲ)

SRI D. B. CHANDRE GOWDA.—Our Government at the Centre said it shall be plced on the table of the House. That is they the report of Enquiry Commissions should be tabled before the House. Let us not forget the past history, the past history of the

Congress Government. Your Government at the Centre took a decision and passed a law saying that the Report of the Enquiry Commissions should not be tabl d on the floor of the House ಇವತ್ತು ಇಡಿಯೆಂದು ಹೇಳುತ್ತೀರಿ ನಿಮಗೆ ಗೊತ್ತಿಲ್ಲವೆ ? ಚರ್ಚೆಮಾಡುವುದಕ್ಕೆ ನಾವು ಹಿಂದೆ ಹೋಗುತ್ತಿಲ್ಲ. ಟಿ ಬಿಲ್ ಗುದ್ದುವುದು ಇದೆಯಲ್ಲ ಅದಕ್ಕೆ ನೀವು ಎಲ್ಲಿಂದ ಬಂದಿದ್ದೀರಿ ಎಂದು ನಿಮ್ಮ ಜನ್ಮ ನಕ್ಷತ್ರ ರಾಶಿಗಳನ್ನು ಹೇಳಿದ್ದೇನೆ.

ಶ್ರೀ ಸಿ. ಭೈರೇಗೌಡ. ಮಾನ್ಯ ವಿರೋಧಪಕ್ಷದ ನಾಯಕರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ವರದಿ it is the property of the Parliment... ಇಲ್ಲಿ ನಾವು ಚರ್ಚೆ ಮಾಡಬಹುದೇ ಎನ್ನತಕ್ಕ ಮಾತನ್ನು ಎತ್ತಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡುವುದಕ್ಕೆ ಮೊದಲು ಇಲ್ಲಿ ಚರ್ಚೆಮಾಡಬಹುದೇ ಎನ್ನುವ ವಿಚಾರವನ್ನು ಎತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಈ ವರದಿ It is under Commission of Inquiry Act. .. ..ಪ್ರಕಾರ ಇರತಕ್ಕದ್ದು. ಸಾಮಾನ್ಯವಾಗಿ ಎಲ್ಲಾ ವರದಿಗಳು ಕೂಡ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುವುದಿಲ್ಲ. ಕೆಲವು ವರದಿಗಳನ್ನು ಚರ್ಚೆ ಮಾಡುವುದೇ ಇಲ್ಲ, ಬಿಟ್ಟುಬಿಡುತ್ತಾರೆ The Parliament will leave it to the Government to take further action in the matter...ಹಾಗಾದರೆ ಇದನ್ನು ಕೂಡ ಅದೇ ತರಹ ಮಾಡಿದರೆ. ಇದರಲ್ಲಿ ಕೇಂದ್ರಸರ್ಕಾರ ಕ್ರಮತೆಗೆದುಕೊಳ್ಳುವುದಕ್ಕೆ ಕೂಡ ಕಷ್ಟ ಇದೆ. ಕಾರಣ ಏನೆಂದರೆ ಇದು ನಮ್ಮ ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟಿದ್ದು ಮತ್ತು ಬೆಂಗಳೂರಿಗೆ ಸಂಬಂಧಪಟ್ಟ ವಿಚಾರವಾಗಿದೆ ಆದ್ದರಿಂದ ಇವತ್ತು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಆಗುತ್ತದೆ, ಬಿಡುತ್ತದೆ ಎನ್ನತಕ್ಕಂಥಾದ್ದು ಇಲ್ಲಿ ಅನಾವಶ್ಯಕ. ಈ ವಿಚಾರ ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟಿದ್ದು, ನಮಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಇದರಲ್ಲಿ ಅನೇಕ ಸರ್ಕಾರಿ ನೌಕರರು ಕೂಡ ಇನ್ವಾಲ್ ಆಗಿರತಕ್ಕಂಥ ವಿಚಾರ ಇದೆ. ಆದಕಾರಣ ಇಲ್ಲಿ ಚರ್ಚೆ ಆಗಬೇಕಾದ ಅವಶ್ಯಕತೆ ಇದೆ. ಮತ್ತು ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದದ್ದು ಕೂಡ ಅವಶ್ಯಕ ವಿದೆ, ಆದ್ದರಿಂದ ತಾವು ಇದಕ್ಕೆ ಒಂದು ವೇಳೆಯನ್ನು ನಿಗದಿಪಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಸಂಜೆಯೊಳಗೆ ವರದಿಯನ್ನು ತರಿಸುವುದಕ್ಕೆ ಪ್ರಯತ್ನಪಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ವರದಿ ಬಂದಮೇಲೆ ಬೇಕಾದರೆ ಚರ್ಚೆ ಮಾಡೋಣ. ತಾವು ಆದಕ್ಕೆ ಕಾಲವನ್ನು ನಿಗದಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ಚೀಟಿ ಕಳಿಸಿದ್ದಾರೆ. "ಮಾನ್ಯ ಸಭಾಧ್ಯಕ್ಷರೇ, ದಯಮಾಡಿ ಗಂಟಲು ಜಾಸ್ತಿ ಇರುವ ಸದಸ್ಯರು ಮಾತನಾಡುವಾಗ ಮೈಕ್ ಉಪಯೋಗ ಸಲ್ಲದು. ನಮ್ಮ ಕಿವಿ ಒಡೆದು ಹೋಗುವಂತಹ ಅನುಭವವಾಗುತ್ತದೆ. ಇದರ ಬಗ್ಗೆ ತಾವು ಸೂಚನೆ ಕೊಡುವಿರಾ ? " ಎಂದು ಶ್ರೀಮತಿ ಮೋಟಮ್ಮನವರು ಮತ್ತು ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಕೇಳಿದ್ದಾರೆ. ಅವರು ಉದಾಹರಣೆಗಳನ್ನು ಕೂಡಾ ಕೊಟ್ಟಿದ್ದಾರೆ. ಅದನ್ನು ನಾನು "ಕ್ಲಾಸಿಫೈಡ್ ಇನ್‌ಫರಮೇಷನ್" ಅಂತ ವಿತ್‌ಹೋಲ್ಡ್ ಮಾಡುತ್ತೇನೆ.

ಶ್ರೀ ವಾಟಾಳ್‌ನಾಗರಾಜ್.—ಈಗ ಯಾರು ಗಂಟಲು ಜಾಸ್ತಿ ಇರುವವರು ಎಂದು ನಮಗೆ ಸ್ವಲ್ಪ ಅನುಮಾನ ಬಂದಿದೆ. ತಾವು ದಯವಿಟ್ಟು ಹೇಳಬೇಕು, ಅರ್ಧ ಹೇಳಿದ್ದೀರಿ.

ಅಧ್ಯಕ್ಷರು.—ಈಗ ಸಭೆಯಲ್ಲಿ ಮಾನ್ಯ ಸದಸ್ಯರ ಸೌಕರ್ಯ, ಅವರ ಆರೋಗ್ಯವನ್ನು ಗಮನಿಸ ತಕ್ಕದ್ದು ನನ್ನ ಕೆಲಸ. ಆದ್ದರಿಂದ ಅವರ ಅನಿಸಿಕೆ ಏನೆಂದರೆ, ನಮ್ಮ ಕಿವಿಗೆ ಸ್ವಲ್ಪ ಅನಾನುಕೂಲ ವಾಗುತ್ತಿದೆ.ನೀವು ಮೈಕ್ ವಿಚಾರದಲ್ಲಿ ಸ್ವಲ್ಪ ಹೇಳಿ ಎಂದಿದೆ. ಬಾಕಿ......

ಶ್ರೀ ವಾಟಾಳ್ ನಾಗರಾಜ್. - ಅವರ ಆರೋಗ್ಯಕ್ಕೋಸ್ಕರ ಇನ್ನೊಬ್ಬರ ಕತ್ತನ್ನು ಕುಯ್ಯುತ್ತೀರಾ ? ಗಂಟಲನ್ನು ಕುಯ್ಯುತ್ತೀರಾ ? ಇದು ಸಾಧ್ಯ ಇಲ್ಲ. ಯಾರ್ಯಾರು ಅಂತ ಹೇಳಿ. ನಾವು ಯಾರು ಆ ರೀತಿ ಇಲ್ಲ. ಅಂತ ನಾನು ಅಂದುಕೊಂಡಿದ್ದೇನೆ

ಅಧ್ಯಕ್ಷರು.—ಈಗ ನಾನು ಹೇಳಿದ್ದೇನೆ, It is a classified information. ಇನ್ನು ಯಾರಿಗೂ ಅಲ್ಲ. It is between the Speaker and two Members......

ಶ್ರೀ ಎಸ್. ಬಂಗಾರಪ್ಪ. ನಾನು ಆ ವಿಚಾರದಲ್ಲಿ ಮಾತನಾಡುತ್ತಿಲ್ಲ. ಅಂದರೆ ವರದಿ ವಿಚಾರ ಬಗ್ಗೆ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಮುಂಚೆ ಮಾನ್ಯ

ಮುಖ್ಯಮಂತ್ರಿಗಳು ವರದಿ ಬಂದ ಕೂಡಲೇ, ಆದಷ್ಟು ಜಾಗ್ರತೆ ಅದನ್ನು ಸದನದಲ್ಲಿ ಇಡತಕ್ಕಂಥ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದಾರೆ. ಅತಿಶೀಘ್ರವಾಗಿ ವರದಿಯ ಪ್ರತಿಯನ್ನು ಪಡೆಯುತ್ತೇವೆ ಎಂದು ಕೂಡ ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ವಿಚಾರದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಈ ಕುಲದೀಪ್‌ಸಿಂಗ್ ಆಯೋಗದ ವರದಿ ಏನಿದೆ, ಅದು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಷಯವಾಗಿರುವುದರಿಂದ ಚರ್ಚೆಗೆ ನಮ್ಮ ಅಭ್ಯಂತರ ಇಲ್ಲವೆಂದಿದ್ದಾರೆ. ಇವತ್ತು ಪ್ರಶ್ನೆ ಇರುವುದು, Kuldip Singh commission under the commission of Enquires Act. 1952. ರಚನೆಯಾಗಿದೆ, ಈಗ ಅದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ. ಚರ್ಚೆ ಮಾಡುವ ಹಾಗಿದ್ದರೆ ಪಾರ್ಲಿಮೆಂಟಿನಲ್ಲಿ ಮಾತ್ರ ಇಲ್ಲಿ ಅಲ್ಲ ಎನ್ನುವ ಪ್ರಶ್ನೆಗಿಂತ ವಿಷಯ ಬಹಳ ಮುಂದೆ ಹೋಗಿದೆ, ಈ ವರದಿಯಲ್ಲಿರತಕ್ಕಂಥ ವಿಚಾರಗಳ ಬಗ್ಗೆ ಸದನದ ಎಲ್ಲ ಭಾಗಗಳಿಂದ ಕೆಲವೊಮ್ಮೆ ಒತ್ತಡದ ಚೌಕಟ್ಟಿನಲ್ಲಿ ಒಮ್ಮತದಲ್ಲಿ ಚರ್ಚೆ ನಡೆಸ

೧೧–೫೦ ಎ.ಎಂ

ತಕ್ಕ ಅಭಿಪ್ರಾಯಕ್ಕೆ ನಾವು ಈಗಾಗಲೇ ಬಂದು ತಲುಪಿದ್ದೇವೆ. ಇಲ್ಲಿ ಚರ್ಚೆಯಾಗಬೇಕೇ ಅಥವಾ ಬಿಡಬೇಕೇ ಎನ್ನತಕ್ಕ ವಿಚಾರ ಈಗ ಮೂಲಭೂತ ವಿಚಾರವಾಗಿ ಉಳಿದಿಲ್ಲ. ಚರ್ಚೆಯಾಗಬೇಕೆಂಬ ಅಭಿಪ್ರಾಯವನ್ನು ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಮತ್ತೆ ಮಾನ್ಯ ಭೈರೇಗೌಡರು ಹೇಳಿದ ಹಾಗೆ, ಪಾರ್ಲಿಮೆಂಟ್‌ನಲ್ಲಿ ಚರ್ಚೆ ಆಗಬೇಕೇ ಅಥವಾ ಇಲ್ಲಿ ಚರ್ಚೆ ಆಗಬೇಕೇ ಎನ್ನುವುದನ್ನು ವಿಚಾರ ಮಾಡುವುದಲ್ಲ. ಇದಕ್ಕಾಗಿ ವಿರೋಧಪಕ್ಷದ ನಾಯಕರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈಗ ಉಳಿದಿರುವುದು ಒಂದೇ ದಾರಿ, ಅದು ತಾವು ತೆಗೆದುಕೊಳ್ಳತಕ್ಕ ತೀರ್ಮಾನ ಈ ಸದನದಲ್ಲಿ ಈ ವಿಚಾರ ಚರ್ಚೆಯಾಗಬೇಕೆಂದು ಬಂದಾಗ, ಚರ್ಚೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳೂ ಹೇಳಿದಾಗ, ಇಲ್ಲಿ ಸರ್ಕಾರದ ಅಭಿಪ್ರಾಯ, ವಿರೋಧಪಕ್ಷದ ಅಭಿಪ್ರಾಯ, ಸದನದ ಎಲ್ಲಾ ಮೂಲೆಗಳ ಅಭಿಪ್ರಾಯ ಇದ್ದಾಗ, ದಯ ಮಾಡಿ ತಾವು ಕಾಲವನ್ನು ನಿಗದಿ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುವುದು ಮಾತ್ರ ಉಳಿದಿದೆ ಎಂಬ ಅಭಿಪ್ರಾಯವನ್ನು ನಾನು ಇಟ್ಟಿದ್ದೇನೆ. ಇದರ ವಿಚಾರದಲ್ಲಿ ಸಂಬಂಧಪಟ್ಟ ವರದಿಯ ಪ್ರತಿಯೂ ಬರುವ ಅವಶ್ಯಕತೆ ಇದೆ. ಇದು ಇಲ್ಲದೇ ಕೆಲವೊಮ್ಮೆ ಪತ್ರಿಕೆಯಲ್ಲಿ ಬಂದಿರತಕ್ಕ ವರದಿಗಳೂ ನಮಗೆ ಆಧಾರವಾಗಿರುತ್ತವೆ. ಪತ್ರಿಕಾ ವರದಿಗಳೂ ವಿಷಯದ ಪ್ರಸ್ತಾಪಕ್ಕೆ ಮತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟಿರತಕ್ಕ ಸಂದರ್ಭಗಳೂ ಇವೆ. ಆದರೆ, ಈಗ ವರದಿಯ ಪ್ರತಿ ಬರತಕ್ಕ ಸಂದರ್ಭ ಇರುವುದರಿಂದ, ಆ ಪ್ರತಿಯನ್ನು ಪಡೆದು, ಅತಿ ಶೀಘ್ರದಲ್ಲಿಯೇ ಅಂದರೆ ಇನ್ನು ಎರಡು ಮೂರು ದಿವಸಗಳಲ್ಲಿ ಚರ್ಚೆ ಮಾಡತಕ್ಕ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕೆಂದು ನನ್ನ ವಿನಂತಿ. ನನ್ನ ಅಭಿಪ್ರಾಯದಲ್ಲಿ ಮಾನ್ಯ ಅಧ್ಯಕ್ಷರಿಗೆ ಉಳಿದಿರುವುದು ಒಂದೇ ದಾರಿ. ದಯವಿಟ್ಟು ತಾವು ಚರ್ಚೆ ದಿನಾಂಕ, ಕಾಲವನ್ನು ಗೊತ್ತು ಮಾಡುವುದು ಮಾತ್ರ ಉಳಿದಿದೆ, ಚರ್ಚೆಯಾಗಬೇಕು ಎನ್ನುವುದು ಎಲ್ಲರ ಅಭಿಪ್ರಾಯವಾಗಿವೆ,

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ಮಾನ್ಯ ಬಂಗಾರಪ್ಪನವರು ವಿಶ್ಲೇಷಣೆ ಮಾಡಿದರು, I would like to ask him a simple question. Any report under the Commission of Enquiry Act should be annexed with the action taken repo t also. Would the Central Government imitiate action taken or the State Government ?

ಶ್ರೀ ಎಸ್. ಬಂಗಾರಪ್ಪ.—ಒಂದೇ ಒಂದು ವಿಚಾರ. ವರದಿ ಯಾವುದಿದೆ, under Commission of Enquiries Act of 1952......
ರಾಜ್ಯ ಸರ್ಕಾರ ಇರಬಹುದು ಅಥವಾ ಕೇಂದ್ರ ಸರ್ಕಾರ ಇರಬಹುದು. ಒಂದು ಸಾರಿ ನೇಮಕ ಆದಮೇಲೆ, ವರದಿಯೂ ಸಹ ಬಂದ ಮೇಲೆ ಆ ವರದಿಯನ್ನು ಸದನದ ಚರ್ಚೆಗಾದರೂ ಇಡಬಹುದು, ಪಬ್ಲಿಕ್ ಒಪೀನಿಯನ್ elicite ಮಾಡುವುದಕ್ಕೂ ಇಡಬಹುದು, ಇದರ ಮೇಲೆ ಕ್ರಮವನ್ನೂ ತೆಗೆದುಕೊಳ್ಳಬಹುದು. ಇದರ ಬಗ್ಗೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಂಡಿದೆಯೋ ಇಲ್ಲವೋ ಎನ್ನುವುದು ಅದು ಪ್ರತ್ಯೇಕ. ಇದು ಕರ್ನಾಟಕ ರಾಜ್ಯದ ಆಸ್ತಿಗೆ ಸಂಬಂಧಪಟ್ಟ ಪ್ರಶ್ನೆ ಆಗಿರುವುದರಿಂದ, ಕುತೂಹಲ ಕರ್ನಾಟಕದ ರಾಜ್ಯದ ಜನತೆಯ ವ್ಯಾಪ್ತಿ ಮೀರಿ, ಗಡಿ ದಾಟಿ ಹೋಗಿರುವುದರಿಂದ ಹಾಗೂ ಈಗಾಗಲೇ ಈ ವಿಚಾರದ ಬಗ್ಗೆ ನಾವು ಚರ್ಚೆ ಮಾಡಿ ಕೇಂದ್ರ ಸರ್ಕಾರಕ್ಕೆ ವರದಿ ಹೋಗಿರುವುದರಿಂದ, ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು, on this report submitted by hat Commission treated under that Act, ಕೇಂದ್ರ ಸರ್ಕಾರ ಏನು ಕ್ರಮ ತೆಗೆದು

ಕೊಳ್ಳಬೇಕೆಂಬ ವಿಚಾರದಲ್ಲೂ ಕೂಡ ನಾವು ಈ ಸದನದ ಮುಖಾಂತರ ನಮ್ಮ ಅಭಿಪ್ರಾಯವನ್ನು ಹೇಳಬಹುದು. ಆದ್ದರಿಂದ ಈ ವಿಷಯ ಚರ್ಚೆಗೆ ದೊಡ್ಡ ಗ್ರಾಸವಾಗಿದೆ. ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆಯೆಂದು ತಾವು ಏನು ಹೇಳಿದಿರಿ, ಅದನ್ನೇ ಮೂಲವಾಗಿಟ್ಟುಕೊಂಡು ನಾವು ಚರ್ಚೆ ಮಾಡೋಣ. ಇದರ ಬಗ್ಗೆ ಮುಂದೆ ಮಾಡಬೇಕಾದ ವಿಚಾರವನ್ನು ಸರ್ಕಾರ ಹೇಳುತ್ತದೆ, ತಮ್ಮ ಅಭಿಪ್ರಾಯವನ್ನೂ ಇಟ್ಟುಕೊಳ್ಳೋಣ. ಆಮೇಲೆ ಒಂದು ತೀರ್ಮಾನಕ್ಕೆ ಬರೋಣ......

ಶ್ರೀ ಡಿ. ಬಿ. ಚಂದ್ರೇಗೌಡ.—ನಮ್ಮ ಮಾತನ್ನು ಅವರ ಬಾಯಲ್ಲಿ ಬೇರೆ ರೀತಿ ಹೇಳುತ್ತಿದ್ದಾರೆ. ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲವೆನ್ನುವ ಮಾತನ್ನು ನಾನು ಹೇಳಿದ್ದೇನೆ. ಅವರು ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಈ ಎರಡಕ್ಕೂ ಬಹಳ ವ್ಯತ್ಯಾಸ ಇದೆ. I am liniting only to the question of propriety. I want your considered opinion on that.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ್ದನ್ನೇ ನಾನು ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಮಾಡಬೇಕೇ ಬಿಡಬೇಕೇ ಎನ್ನುವುದರ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ.—ಕನ್ನಡದಲ್ಲಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಅವರು ಕನ್ನಡದಲ್ಲೇ ಮಾತನಾಡುವುದಕ್ಕೆ ನಿಂತರು ಅವರ ಕಿವಿಗೆ ಯಾವ ಭಾಷೆ ಕೇಳಿಸುತ್ತಿದೆಯೋ ನನಗೆ ಗೊತ್ತಿಲ್ಲ. ಅವರ ಕಿವಿ ಸರಿಪಡಿಸಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಸಾಂಡ್ರಾ ಅವರೇ ನಾನು ನಿಮಗಿಂತ ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ.—ಚಂದ್ರೇಗೌಡರು ಇಂಗ್ಲೀಷ್‌ನಲ್ಲಿ ಮಾತನಾಡಿದರು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಚಂದ್ರೇಗೌಡರು ಅಷ್ಟೇ ನಿಮಗಿಂತ ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಚಂದ್ರೇಗೌಡರೂ ಸಹ ಬಹಳ ಸುಂದರವಾದ ಒಳ್ಳೆಯ ಕನ್ನಡ ಮಾತನಾಡುತ್ತಾರೆ. ಅವರ ಬಗ್ಗೆ ಯಾರೂ ಕಾಳಜಿ ಪಡಬೇಕಾಗಿಲ್ಲ

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕದಲ್ಲಿ ಏನು ಒಂದು ಭೂ ಹಗರಣ ನಡೆಯಿತು ಎಂಬ ಆಪಾದನೆ ಇದೆ ಇದರ ಬಗ್ಗೆ ವಿಚಾರಣೆ ಆಗಬೇಕೆಂದು ಕರ್ನಾಟಕದ ಕೆಲವು ಮುಖಂಡರುಗಳು ಕೇಳಿದರು ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಇದರ ಬಗ್ಗೆ ವಿಚಾರಣೆ ಆಗಬೇಕೆಂಬ ಬೇಡಿಕೆ ಬಂತು. ಕೇಂದ್ರ ಸರಕಾರ ಒಂದು ಆಯೋಗ ನೇಮಕ ಮಾಡಿತು. ಈ ಆಯೋಗ ಯಾವ ಹಿನ್ನಲೆಯಲ್ಲಿ ಯಾವಾಗ ಏತಕ್ಕೆ ನೇಮಕ ಆಯಿತು ಎಂಬುದನ್ನು ಈಗ ಹೇಳುವುದಿಲ್ಲ. ಚರ್ಚೆ ಮಾಡುವ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲರೂ ಸಹಿತ ಚರ್ಚೆ ಆಗಬೇಕೆಂಬ ಅಭಿಪ್ರಾಯ ಪಟ್ಟಿದ್ದಾರೆ ನಾವು ನಾಲ್ಕು ಜನ ವಿರೋಧ ಮಾಡುತ್ತೇವೆ ಎಂದು ಅಭಿಪ್ರಾಯ ಪಡಬೇಕಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ...

ಶ್ರೀ ಪಿ. ಜಿ. ಆರ್. ಸಿಂಧ್ಯಾ ನಾನು ಈಲ್ಡ್ ಆಗುತ್ತಿಲ್ಲ. ಈ ಆಯೋಗ ಏತಕ್ಕೆ ಯಾವ ಹಿನ್ನಲೆಯಲ್ಲಿ ಯಾವಾಗ ನೇಮಕ ಆಯಿತು ಎನ್ನುವುದರ ಬಗ್ಗೆ ನಾನು ಹೇಳುವುದಿಲ್ಲ ಎಂದು ಹೇಳಿದೆ. ಪ್ರಶ್ನೆ ಏನೆಂದರೆ ನಾವು ಯಾರೂ ಸಹಿತ ಇದಕ್ಕೆ ವಿರೋಧ ಮಾಡಿಲ್ಲ. ಇದರ ಬಗ್ಗೆ ಚರ್ಚೆ ಆಗಿ ಹೋಗಿ ಬಿಟ್ಟರೆ ಏನೂ ಆಗುವುದಿಲ್ಲ. ನಾವು ಖಂಡಿತಾ ಟೆಲಿಫೋನ್ ಪ್ರಕರಣದ ಬಗ್ಗೆಯೂ ಚರ್ಚೆ ಆಗಲಿ ಎಂಬ ಮಾತನ್ನು ಹೇಳಿದೆವು ಏಕೆಂದರೆ ಜನಗಳಿಗೆ ಗೊತ್ತಾಗಬೇಕು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ಮನೆಗಳು ಚರ್ಚೆ ಮಾಡತಕ್ಕ ವೇದಿಕೆಗಳು ಇರತಕ್ಕಂಥಾದ್ದು ಈ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಇದು ತಮಗೆಲ್ಲಾ ಗೊತ್ತಿದೆ. ಕೇಂದ್ರ ಸರಕಾರಕ್ಕೆ ಮಾನ್ಯ ಕುಲದೀಪ್ ಸಿಂಗ್‌ರವರು ವರದಿ ಕೊಟ್ಟಂಥ ಸಂದರ್ಭದಲ್ಲಿ ಕೇಂದ್ರ ಸರಕಾರದವರು ಏನು ಮಾಡಿದರು ಎಂದರೆ ತಕ್ಷಣ ಇದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲಿ. ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿ ಆಪೊಲಿಟಿಕಲ್ ಅಫೇರ್ಸ್ ಕಮಿಟಿಗೆ ಇದನ್ನು

ರೆಫರ್ ಮಾಡಿದರು ರೆಫರ್ ಮಾಡಿ ಇದರ ಬಗ್ಗೆ ಏನು ಆಕ್ಷನ್ ತೆಗೆದುಕೊಳ್ಳಬೇಕೆಂದು ತಿಳಿಸಿ ಎಂಬ ಮಾತನ್ನು ಹೇಳಿದರು. ಅದಾದನಂತರ ವರದಿಯನ್ನು ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಇರತಕ್ಕಂಥಾದ್ದರ ಬಗ್ಗೆ ಮಾನ್ಯ ಅಧ್ಯಕ್ಷರುಗಳಿಗೆ ತಿಳಿಸಿದ್ದಾರೆ ಈಗ ಸಧ್ಯದಲ್ಲಿ ನಾನು ಭಾವಿಸಿಕೊಂಡ ಹಾಗೆ ಕೇಂದ್ರ ಸರಕಾರದವರು ಇದರ ಬಗ್ಗೆ ಎನ್‌ಕ್ವೈರಿ ಕಮಿಷನ್ ಆಕ್ಟ್ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಒಂದು ಪಕ್ಷ ರಾಜ್ಯ ಸರಕಾರ ಇದನ್ನು ನೇಮಕ ಮಾಡಿದ್ದರೆ ಇದರ ಜೊತೆಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನೂ ಸಹಿತ ತಾವು ನಮಗೆ ತಿಳಿಸುತ್ತಿದ್ದೀರಿ. ಅವತ್ತು ಬಾಗೂರುನವಿಲೆ ಟನಲ್ ವಿಚಾರದಲ್ಲಿ ಎನ್‌ಕ್ವೈರಿ ರಿಪೋರ್ಟ್ ಇಟ್ಟಂಥ ಸಂದರ್ಭದಲ್ಲಿ ನಾವು ಈಕಡೆ ಇದ್ದಂಥ ಸದಸ್ಯರೇ ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂದು ಇದೆ ಎಂಬುದನ್ನು ದಯೆಯಿಟ್ಟು ತಿಳಿಸಿ ಎಂದು ಕೇಳಿದವು. ಇದುವರೆಗೂ ಸಹಿತ ಅದರ ಬಗ್ಗೆ ಸರ್ಕಾರ ತಿಳಿಸಿಲ್ಲ. ಇದರ ಬಗ್ಗೆ ನಾನು ಮಾತನಾಡಲು ಹೋಗುತ್ತಿಲ್ಲ. ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಸರಕಾರಕ್ಕೆ ಪತ್ರ ಬರೆದಿರುವಾಗ ಅವರು ವರದಿಯನ್ನು ಕಳುಹಿಸಲೇ ಕಳುಹಿಸಿಕೊಡಬೇಕಾಗುತ್ತದೆ. ಅದು ಇವತ್ತು ಪಬ್ಲಿಕ್ ಡಾಕ್ಯುಮೆಂಟ್ ಆಗಿದೆ. ಅದನ್ನು ಕಳುಹಿಸುತ್ತಾರೆ. ವರದಿ ಬರುತ್ತದೆ. ನೀವು ಯೋಚನೆ ಮಾಡಿ, ರಾಜ್ಯ ಸರಕಾರ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಯೋಚನೆ ಮಾಡಿ. ಈಗ ಸದಸ್ಯರುಗಳು ಹೇಳಿದ್ದಾರೆ ೧೧೦ ಎಕರೆ ಜಮೀನು ಅಮೇರಿಕಾಕ್ಕೆ ಹೊರಟು ಹೋಗಿದೆ. ಎಷ್ಟು ಕೋಟಿ ಅವ್ಯಹಾರ ಆಗಿದೆ, ದುಡ್ಡು ಎಲ್ಲಿದೆ. ಯಾವ ಸರಕಾರ ೧೧೦ ಎಕರೆ ಜಮೀನನ್ನು ಕೊಡಲು ಬಿ. ಡಿ. ಎ. ಮಾಡಿದ ನಿರ್ಣಯವನ್ನು ರದ್ದು ಮಾಡಿತು ಎಂದು ಹೇಳಿದರೆ ಅದರ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ತಮ್ಮ ಸಚಿವ ಸಂಪುಟದಲ್ಲೂ ಸಹ ತೀರ್ಮಾನ ಮಾಡಬೇಕಾಗುತ್ತದೆ. ಅದು ನಿಮಗೆ ಬಿಟ್ಟತಕ್ಕಂಥ ವಿಚಾರ ವಸ್ತುಸ್ಥಿತಿಯಲ್ಲಿ ಅದೇನೂ ಟ್ರಾನ್ಸ್‌ಫರ್ ಆಗತಕ್ಕಂಥ ಪ್ರಾಪರ್ಟಿ ಅಲ್ಲ ಕೊಳ್ಳೆ ಹೋಗತಕ್ಕಂಥಾಗಲಿ ಏನೂ ಇಲ್ಲ ಇವತ್ತು ಚರ್ಚೆಮಾಡಿದರೂ ನಾಳೆ ಚರ್ಚೆ ಮಾಡಿದರೂ ಅಥವಾ ಸೋಮವಾರ ಚರ್ಚೆ ಮಾಡಿದರೊ ಆ ಜಮೀನು ಏನು ಆಗುವುದಿಲ್ಲ. ಇವತ್ತು ಆ ಜಮೀನೇನೂ ಲೋಖಂಡವಾಲಾ ವಶದಲ್ಲಿ ಇಲ್ಲ. ಜಮೀನು ಬಿ. ಡಿ. ಎ. ವಶದಲ್ಲಿ ಇದೆ. ಕೇಂದ್ರ ಸರಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರಕಾರಕ್ಕೆ ತಿಳಿಸುವವರಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸರಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ವರದಿಯನ್ನು ನೋಡಿಯೇ ಇಲ್ಲ ಎಂದು ಹೇಳುತ್ತಿದ್ದಾರೆ, ಇವತ್ತು ವರದಿ ಬರಬಹುದು ಎನ್ನತಕ್ಕ ಆಸೆಯನ್ನು ವ್ಯಕ್ತ ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ವರದಿಯ ಬಗ್ಗೆ ಚರ್ಚೆ ಮಾಡುವುದು ಇಷ್ಟೊಂದು ಸೂಕ್ತವಾಗಿರುತ್ತದೆ ಈ ಸದನ ಈ ವರದಿಯ ಬಗ್ಗೆ ಚರ್ಚೆ ಮಾಡಿ ಎಷ್ಟೊಂದು ರಚನಾತ್ಮಕವಾದ ಸಲಹೆಗಳನ್ನು ಕೊಡಬಹುದು ಈ ಸದನದ ಚರ್ಚೆಯಿಂದ ಹಾವನ್ನು ಕೊಲ್ಲಲಿಕ್ಕೆ ದೊಣ್ಣೆಯನ್ನು ಮುರಿಯಲಿಕ್ಕೆ ಎಷ್ಟೊಂದು ಸಹಾಯ ಆಗಬಹುದು ಎಂಬುದನ್ನು ತಾವು ತೀರ್ಮಾನ ಮಾಡಬೇಕು. ತಾವು ತೀರ್ಮಾನ ಮಾಡಬೇಕಾಗಿರುವುದು ಏನು ಎಂದರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ತಪ್ಪಿತಸ್ಥರನ್ನು ಗಲ್ಲಿಗೇರಿಸಬೇಕು ಶಿಕ್ಷೆ ಕೊಡಬೇಕು. ಯಾವ ಕಾನೂನಿನಲ್ಲಿ ಏನಿದೆ ಎಂಬುದು ಸರಕಾರ ನಿರ್ಧಾರ ಮಾಡಬೇಕಾಗುತ್ತದೆ. ತಾವು ಇದರ ಬಗ್ಗೆ ವಿಚಾರ ಮಾಡಿ, ತಾವು ಕೊಡತಕ್ಕ ತೀರ್ಮಾನ ನಿರ್ಣಯ ಏನಿದೆ ಅದನ್ನು ಇಡಿ ರಾಜ್ಯದಲ್ಲಿ ಇಡೀ ರಾಷ್ಟ್ರದಲ್ಲಿ ಮುಂದೆ ಬರತಕ್ಕಂಥ ದಿವಸಗಳಲ್ಲಿ ಅನುಸರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಲೋಕಸಭೆಯ ಮುಂದಿರತಕ್ಕಂಥ ವರದಿ ಬಗ್ಗೆ ಅಲ್ಲಿ ತೀರ್ಮಾನ ಆಗುವುದಕ್ಕಿಂಥ ಮುಂಚೆ ಕೇಂದ್ರ ಸರಕಾರ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ರಾಜ್ಯ ಸರಕಾರ ವರದಿಯನ್ನು ನೋಡುವುದಕ್ಕೆ ಮುಂಚೆ ಆ ವರದಿಯ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ತೀರ್ಪನ್ನು ತಾವು ಏನು ಕೊಡುತ್ತೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಆ ವಿಷಯವನ್ನು ಚರ್ಚೆ ಮಾಡಿದರೆ ಮಾನ್ಯ ಸದಸ್ಯರಿಗೆ ಆತಂಕ ಏತಕ್ಕೆ ?...

ಶ್ರೀ ಡಿ.ಬಿ. ಚಂದ್ರೇಗೌಡ.—ಈಗ ಆತಂಕ ಯಾರು ವ್ಯಕ್ತಪಡಿಸಿದರು ? ನಮಗೇನೂ ಆತಂಕ ಇಲ್ಲ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಇತಿಹಾಸ ಸೃಷ್ಟಿ ಮಾಡ್ಡಿದ್ದೀರಿ...

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಲೋಕಸಭೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕಿಂತ ಮುಂಚೆ ಈ ಸದನದಲ್ಲಿ ಚರ್ಚೆ ಮಾಡತಕ್ಕಂಥಾದ್ದು ಸರಿಯೇ ಎನ್ನತಕ್ಕಂಥ ಒಂದು

ಪ್ರೊಪ್ರೈಟರಿ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಸಾರ್ವಜನಿಕವಾಗಿ ಒಂದು ವಸ್ತುವನ್ನು ಇಟ್ಟ ಮೇಲೆ ಆ ವಿಷಯವನ್ನು ಈ ಸದನದಲ್ಲಿಯೂ ಚರ್ಚೆ ಮಾಡಬಹುದು, ಈ ಸದನದ ಹೊರಗಡೆ ಸಹ ಚರ್ಚೆ ಮಾಡಬಹುದು. ಇದನ್ನು ಯಾರೂ ಪ್ರತಿಬಂಧ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಆಯೋಗದ ವರದಿಯನ್ನು ಲೋಕಸಭೆಯ ಲೈಬ್ರರಿಯಲ್ಲಿ ಸಾರ್ವಜನಿಕರ ಅವಗಾಹನೆಗೆ ಇಟ್ಟ ಮೇಲೆ ಅದು ಸಾರ್ವಜನಿಕರಿಗೆ ಸಿಗುವಂತಹ ಒಂದು ವಸ್ತುವಾಗಿದೆ. ಆ ವಸ್ತುವಿನ ಆಧಾರದ ಮೇಲೆ ನಾವು ಇವತ್ತು ಯಾವ ಆತಂಕವೂ ಇಲ್ಲದೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಈ ಸದನದಲ್ಲಿ ಚರ್ಚೆ ಮಾಡಬಹುದು ಮತ್ತು ಈ ಸದನದ ಹೊರಗಡೆ ಬೇಕಾದರೂ ಸಾರ್ವಜನಿಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಈ ಸದನದ ಹೊರಗಡೆ ಬೇಕಾದರೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಲೋಕಸಭೆಯೂ ಕೂಡ ಈ ವಿಷಯ ಚರ್ಚೆ ಮಾಡಬೇಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸದನದ ಹೊರಗೆ ಮತ್ತು ಈ ಸದನದ ಒಳಗೆ ಬೇಕಾದರೂ ಚರ್ಚೆ ಮಾಡಬಹುದು. ಆದರೆ ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಹೇಳಿ ನೀವು ನಮ್ಮ ಪ್ರೊಪ್ರೈಟರಿಯನ್ನು ಪ್ರಶ್ನೆ ಮಾಡುವುದು ಸರಿಯಲ್ಲ ತಾವು ಹಿಂದೆ ಲೋಕಸಭಾ ಸದಸ್ಯರಾಗಿದ್ದವರು ಮಂತ್ರಿಗಳಾಗಿದ್ದವರು ಮತ್ತು ಈ ಸದನದ ಅಧ್ಯಕ್ಷರಾಗಿದ್ದವರು : ತಮಗೆ ಏತಕ್ಕೆ ಇಷ್ಟೊಂದು ಆತಂಕ ಎಂದು ನಾನು ಆಗಲೆ ಕೇಳಿದ್ದು. ಇದರಲ್ಲಿ ಯಾವುದೇ ಆತಂಕಕ್ಕೆ ಕಾರಣ ಇಲ್ಲವೇ ಇಲ್ಲ. ಇದರ ಜೊತೆಗೆ ನಾನು ಇನ್ನೊಂದು ಮಾತು ಹೇಳುವುದೇನೆಂದರೆ, ಈ ಬಗ್ಗೆ ನಮ್ಮ ಸರ್ಕಾರವೇ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ ಆ ಆಸ್ತಿ ನಮ್ಮ ಸರ್ಕಾರದ್ದು, ಸಾರ್ವಜನಿಕರದ್ದು. ಈ ಆಸ್ತಿಗೋಸ್ಕರ ಹಣವನ್ನು ಇಟ್ಟದ್ದು ಇನ್ನೂ ಬಿ.ಡಿ.ಎ ಯಲ್ಲಿ ಇದೆ, ಆದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕೇವಲ ಈ ವರದಿಯ ಆಧಾರದ ಮೇಲೆ ಅಷ್ಟೇ ಅಲ್ಲ, ಅದು ಸಾರ್ವಜನಿಕರ ಆಸ್ತಿ, ಅದು ಸಾರ್ವಜನಿಕರ ಹಣ. ಅವರ ಮಾನ ಹರಣವಾಗಿದೆ. ಕೇವಲ ಸರ್ಕಾರದಿಂದ ಅಷ್ಟೇ ಅಲ್ಲ, ಬೇರೆ ಬೇರೆ ಮೂಲಗಳಿಂದ ಬಂದರೂ ಮತ್ತೊಂದು ಮೂಲದಿಂದ ಬಂದರೂ ಮತ್ತು ಬಾಯಿ ಮಾತಿನಲ್ಲಿ ಹೇಳಿದರೂ ಕೂಡ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಆದ್ದರಿಂದ ಸರ್ಕಾರ ಈ ಬಗ್ಗೆ ಕ್ರಮಕೈಗೊಳ್ಳಬೇಕಾದ್ದು ಅಗತ್ಯ ಇರುವುದರಿಂದ ಈ ಚರ್ಚೆ ಅವಶ್ಯಕತೆ ಇದೆ. ಆದ್ದರಿಂದ ತಾವು ದಯವಿಟ್ಟು ಚರ್ಚೆಗೆ ಒಂದು ಕಾಲಾವಕಾಶವನ್ನು ನಿಗದಿ ಮಾಡಿ.

ಶ್ರೀ ಬಿ ಎಚ್, ಬನ್ನಿಕೋಡ್ —ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಪಾಯಿಂಟ್ ಇಲ್ಲ. ಇನ್ನು ಆರ್ಡರ್ ಎಲ್ಲಿ ಬಂತು ತಾವು ಏನಾದರೂ ಹೇಳುವುದಿದ್ದರೆ ಹೇಳಿ ತಾವು ಹೇಳಬೇಕಾದ್ದನ್ನು ಹೇಳಿ ಎಲ್ಲರೂ ಹೇಳಿದ್ದಾರೆ. ನಾನು ನಿಮ್ಮನ್ನು ನಿರ್ಬಂಧಿಸುವುದಿಲ್ಲ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಬೇಡಿ.

ಶ್ರೀ ಡಿ.ಬಿ, ಚಂದ್ರೇಗೌಡ,—ಮಾನ್ಯ ಅಧ್ಯಕ್ಷರೇ, ಅವರು ನನ್ನ ಹೆಸರು ಹೇಳಿದ್ದಾರೆ. ಅದಕ್ಕೆ ನಾನು ಒಂದು ಮಾತು ಹೇಳಬೇಕಾಗುತ್ತದೆ, ಇಂಗ್ಲೀಷ್‌ನಲ್ಲಿ ಒಂದು ಗಾದೆ ಇದೆ ಆದೇನೆಂದರೆ, If you want to hang a dog, call it mad and hang. ಆ ರೀತಿಯಾದರೆ ಮಾಡಿ.

SRI C, BYREGOWDA.—If you want to kill a dog, hang it and kill.

ಶ್ರೀ ಎ.ಕೆ. ಅನಂತಕೃಷ್ಣ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. Somebody has committed a suicide. Now it is a question of burrying it.

ಶ್ರೀ ಬಿ ಎಚ್. ಬನ್ನಿಕೋಡ್,—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರು ಕುಲದೀಪ್‌ಸಿಂಗ್ ಆಯೋಗದ ವರದಿ ಬಗೆಗಿನ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಬೇಕೆಂದು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ನಾವು ಈ ಸದನದಿಂದ ಈ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಿಲ್ಲ, ಆ ಆಸ್ತಿ ಇಲ್ಲಿನದು ಇರಬಹುದು. ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಇಲ್ಲಿ ಇರಬಹುದು ಆದರೆ ವಿಚಾರಣಾ ಆಯೋಗವನ್ನು ನೇಮಿಸಿದಂತಹವರು ಕೇಂದ್ರಸರ್ಕಾರದವರು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಟೆಲಿಫೋನ್ ಟ್ಯಾಪಿಂಗ್‌ಗೆ ಯಾರು ಆಯೋಗವನ್ನು ನೇಮಿಸಿದ್ದರು ?

ಶ್ರೀ ಬಿ. ಎಚ್. ಬನ್ನಿಕೋಡ್.—ನಾನು ಹೇಳುವುದನ್ನು ದಯಮಾಡಿ ಸ್ವಲ್ಪ ಕೇಳಿ. ನಾವು ಸಹ ಈ ವಿಷಯವನ್ನು ಚರ್ಚೆ ಮಾಡುವುದು ಬೇಡ ಎಂದು ಹೇಳಿಲ್ಲ. ನಾನು ಇಲ್ಲಿ ಇರತಕ್ಕಂಥ ಕಾನೂನು ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೇಂದ್ರ ಸರ್ಕಾರ ಈ ಒಂದು ವಿಚಾರಣಾ ಆಯೋಗವನ್ನು ನೇಮಿಸಿತ್ತು ಆ ಆಯೋಗ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ. ಆ ವರದಿಯನ್ನು ಕೇಂದ್ರ ಸರ್ಕಾರ ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಿದ್ದಾರೆ. ಲೋಕಸಭೆಯ ಲೈಬ್ರರಿಯಲ್ಲಿ ಇಟ್ಟಿದ್ದಾರೆ. ಕೇಂದ್ರಸರ್ಕಾರ ಈ ವರದಿಯಮೇಲೆ ತನ್ನದೇ ಆದಂತಹ ನಿರ್ಣಯವನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕಾಗಿದೆ, ಸಾರ್ವಜನಿಕರಿಗೆ ದೇಶದಲ್ಲಿ ಇದರ ಬಗ್ಗೆ ಇರತಕ್ಕ ಸತ್ಯಸ್ಥಿತಿಯನ್ನು ಗೊತ್ತುಮಾಡಬೇಕೆಂಬ ಆತುರ ಇರುವಾಗ ಅವರು ಇದರ ಬಗ್ಗೆ ನಿರ್ಣಯ ವನ್ನು ಕೈಗೊಳ್ಳುತ್ತಾರೆ. ಈ ಆಯೋಗವನ್ನು ಯಾರು ನೇಮಿಸಿದ್ದರೋ ಅವರು ಇದನ್ನು ಚರ್ಚೆ ಮಾಡಬೇಕಾಗುತ್ತದೆ. ಅವರು ಇದರ ಬಗ್ಗೆ ಒಂದು ನಿರ್ಣಯ ಮಾಡಬೇಕಾಗುತ್ತದೆ. ಈ ಹಗರಣ ಇಲ್ಲಿ ಆಗಿರುವುದರಿಂದ ಹಾಗೂ ವ್ಯಕ್ತಿಗಳು ಇಲ್ಲಿರುವುದರಿಂದ ಪಾರ್ಲಿಮೆಂಟಿನಲ್ಲಿ ತೆಗೆದುಕೊಂಡಂತಹ ನಿರ್ಣಯವನ್ನು ಈ ರಾಜ್ಯ ಸರ್ಕಾರಕ್ಕೂ ಸೂಚಿಸಬೇಕಾಗುತ್ತದೆ. ಈ ರಾಜ್ಯ ಸರ್ಕಾರ ಮುಂದಿನ ಕ್ರಮವನ್ನು ಕಾನೂನು ಪ್ರಕಾರ ಜರುಗಿಸಬೇಕಾಗುತ್ತದೆ. ಆದುದರಿಂದ ಈ ವಿಷಯದಲ್ಲಿ ನಾವು ಇಲ್ಲಿ ಚರ್ಚೆ ಮಾಡಿದ್ದೇ ಆದರೆ ನಾವು ಯಾವುದಾದರೂ ಒಂದು ನಿರ್ಣಯಕ್ಕೆ ಬಂದಿದ್ದೇ ಆದರೆ ನಾವು ತೆಗೆದು ಕೊಂಡಂಥ ನಿರ್ಣಯ ಮತ್ತು ಪಾರ್ಲಿಮೆಂಟಿನಲ್ಲಿ ತೆಗೆದುಕೊಳ್ಳತಕ್ಕ ನಿರ್ಣಯ ಈ ಎರಡರಲ್ಲೂ ವ್ಯತ್ಯಾಸಗಳಾದರೆ ಕಾನೂನು ತೊಡಕು ಬರುತ್ತದೆ. ಆದ್ದರಿಂದ ನಾನು ತಮ್ಮ ನಜರಿಗೆ ನಮ್ಮ ಸಂವಿಧಾನ ದಲ್ಲಿರುವ ಆರ್ಟಿಕಲ್ ೨೦, ಸಬ್ ಕ್ಲಾಸ್ ೨ನ್ನು ತರಬಯಸುತ್ತೇನೆ. ಪಾರ್ಲಿಮೆಂಟ್ ಒಂದು ನಿರ್ಣಯಕ್ಕೆ ಬಂದು ನಾವು ಇಲ್ಲಿ ಒಂದು ನಿರ್ಣಯಕ್ಕೆ ಬಂದಾಗ ಸಂವಿಧಾನದ ಆರ್ಟಿಕಲ್ ೨೦ (೨) ಏನು ಹೇಳುತ್ತದೆ ಎಂಬುದನ್ನು ಇಲ್ಲಿ ಓದುತ್ತೇನೆ. ಕೆಲವು ಸ್ನೇಹಿತರು ಹೇಳಿದರು: ಇದು ಕೇವಲ ಚರ್ಚೆ ಯಾಗಬಾರದು; ಹಾವಾದರೂ ಸಾಯಬೇಕು ಕೋಲಾದರೂ ಮುರಿಯಬೇಕು ಎನ್ನುವುದು ಈ ಸದನದ ನಿಜವಾದ ಕಳಕಳಿಯಿದ್ದರೆ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಭಾಧ್ಯಕ್ಷರೆ, ಸಂಶಯ ಇದೆ, ಚರ್ಚೆ ಇಲ್ಲೇ ಆಗಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ.—ಸಾಸತ್ತಿನ ಮೇಲೆ ಸಂಶಯ ವ್ಯಕ್ತಪಡಿಸತಕ್ಕ ಮಾತನ್ನು ಇಲ್ಲಿ ಹೇಳಿ ದರೆ ಅದು ಕಡಿತದಲ್ಲಿ ಉಳಿಯಬಾರದು ಎನ್ನತಕ್ಕದ್ದು ನನ್ನ ಉದ್ದೇಶ.

MR. SPEAKER.—I have only called Mr. Bannikod. ಅವರು ಹೇಳತಕ್ಕದ ಮಾತ್ರ ಕಡತದಲ್ಲಿ ಹೋಗುತ್ತದೆ. ಬಾಕಿಯವರು ಹೇಳಿದ್ದು ಕಡತದಲ್ಲಿ ಏಕೆ ಹೋಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಆರ್ಟಿಕಲ್ ೨೦, ಸಬ್ ಕ್ಲಾಸ್ ೨ ಏನು ಹೇಳುತ್ತದೆ ಅಂದರೆ...

ಸಭಾಧ್ಯಕ್ಷರು.—ಆರ್ಟಿಕಲ್ ೨೦ ಅನ್ನು ಓದಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾವು ಇಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು, ಪಾರ್ಲಿಮೆಂಟಿನಲ್ಲಿ ಮತ್ತೊಂದು ರೀತಿಯ ನಿರ್ಣಯವನ್ನು ತೆಗೆದುಕೊಂಡಾಗ ಅಂದರೆ ಎರಡು ನಿರ್ಣಯಗಳು ವ್ಯತಿರಿಕ್ತವಾದಾಗ ಅದು ಕಾನೂನಿನಲ್ಲಿ ನಡೆಯಲಾರದು. ಪಾರ್ಲಿಮೆಂಟಿಗೆ ಇರತಕ್ಕ ಹಕ್ಕನ್ನು ಈ ಸದನ ಕಸಿದು ಕೊಳ್ಳುವುದಕ್ಕೆ ಆಗುವುದಿಲ್ಲ. ಆರ್ಟಿಕಲ್ ೨೦ (೨) ಏನು ಹೇಳುತ್ತದೆ ಅಂದರೆ

> "No person shall be prosecuted and punished for the same offence more than once."

If we arrive at one conclusion and the Central Government may take someother stand, then, it will not be permitted. ನಾವೇನಾದರೂ ಒಂದು ನಿರ್ಣಯ ಇಲ್ಲಿ ತೆಗೆದುಕೊಂಡರೆ, ಪಾರ್ಲಿಮೆಂಟಿನಲ್ಲಿ ತೆಗೆದುಕೊಳ್ಳಬೇಕಾದ ನಿರ್ಣಯಕ್ಕೆ ತೊಂದರೆ ಬರುತ್ತದೆ. ಆದ್ದರಿಂದ ಇಲ್ಲಿ ಚರ್ಚೆ ಮಾಡಲು, ನಿರ್ಣಯ ತೆಗೆದುಕೊಳ್ಳಲು ಬರಲಾರದು.

† ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ನಾನು ನನ್ನ ವಿಚಾರವನ್ನು, ಬರಿ ಔಚಿತ್ಯದ ವಿಚಾರವನ್ನು ಮಾತ್ರ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರು ತಮ್ಮ ತೀರ್ಮಾನವನ್ನು ಕೇಳಿ ಬಿಟ್ಟಿದ್ದಾರೆ. ಆ ತೀರ್ಮಾನವನ್ನು ತಾವು ಕೊಡುವವರಿದ್ದರೆ, ನಮ್ಮ ಕಡೆಯಿಂದ ಕೂಡ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಏತಕ್ಕೆಂದರೆ, ನಾಳೆ ಕೆಲವು ಸಂಸದೀಯ ಪರಂಪರೆಗಳನ್ನು ಹಾಕಿಕೊಳ್ಳುವಾಗ ನಾವು ಕೆಲವು ವಿಚಾರವನ್ನು ಸ್ಪಷ್ಟವಾಗಿ ಈ ಸದನದಲ್ಲಿ ತಿಳಿದುಕೊಂಡು ಈ ವಿಚಾರವನ್ನು ತಮ್ಮ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಚರ್ಚೆಗೆ ಇಡಬೇಕೋ ಇಡದೇ ಇರಬಹುದೋ ಅಥವಾ ಯಾವುದು ಇಡಬೇಕು ಎಂಬುದನ್ನು ವಾದ ಮಾಡಲಿಕ್ಕೆ ಅಥವಾ ಅದನ್ನು ಒತ್ತಾಯ ಮಾಡಲಿಕ್ಕೆ ನಾನು ಎದ್ದು ನಿಂತಿಲ್ಲ. ಕಮಿಷನ್ ಆಫ್ ಎನಕ್ವೈರಿ ಆಕ್ಟ್ ಪ್ರಕಾರ ಈ ವರದಿಯನ್ನು ಸಂಬಂಧಪಟ್ಟ ಸರ್ಕಾರ ಪರಿಶೀಲನೆ ಮಾಡಿ ಮೆಮೊರ್ಯಾಂಡಂ ಆಫ್ ಆಕ್ಷನ್ ಮಾಡಿ either on the Parliament or respective Legislature ನಲ್ಲಿ ಅದನ್ನು ಇಡತಕ್ಕದ್ದು ಸಾಮಾನ್ಯವಾಗಿ ನಡೆದುಕೊಂಡು ಬಂದಿರತಕ್ಕದ್ದು. ಆದರೆ ಕಾನೂನು ಪ್ರಕಾರ ಅದನ್ನೇ ಮಾಡಬೇಕೆಂದು ಏನೂ ಇಲ್ಲ, ಆ ಒಂದು ವಿಧಾನವನ್ನು ಅನುಸರಿಸದೇ ಇರಬಹುದು. ಆದರೆ ಅದನ್ನು ಮೊದಲು ಮಾಡಬೇಕೇ ಅಥವಾ ಪಬ್ಲಿಷ್ ಮೊದಲು ಮಾಡಬೇಕೇ ಎಂಬ ಪ್ರಶ್ನೆಯಲ್ಲಿ ಜಿಜ್ಞಾಸೆ ಇದೆ. ಕೆಲವು ಸಾರಿ it has got to be placed. It is mandatory under the provisions of the Commission of Inquiry Act. It has got to be placed either on the table of parliament or the Legislature. It is mandatory. ಆ ಕೆಲಸ ಮಾಡದೆ, ಅದನ್ನು ಹೊರಗೆ ಪಬ್ಲಿಷ್ ಮಾಡಬಾರದೆಂದು ಪ್ರೊಹಿಬಿಷನ್ ಇಲ್ಲ. I am just bringing it to the notice of the Hon'ble Speaker. ಈಗ ಇದರಲ್ಲಿ ಏನಾಗಿದೆಯೆಂದರೆ, It has not become the property of the Parliament till today. It has not become the property of the House. Let us understand the position as on today. This has not become the property. unless a particular commission report is placed on the table of the House it does not become the property of that House. That is the correct position. As on today. ದಯಮಾಡಿ ಸ್ವಲ್ಪ ಸಾವಧಾನವಾಗಿ ಕೇಳಿ. I stand to say and emphatically that the report which is submitted by Justice Kuldip Singh to the Government has not been placed before the table of the Parliament till today. What has been done there is a copy which has been furnished to the parliament library and it is understood. Please go through the version of the paper. It has been placed before the Parliament library. Parliamentary library is not the table of the House. ದಯಮಾಡಿ ಸ್ವಲ್ಪ ಸಾವಧಾನದಿಂದ ಕೇಳಿ. ಆ ಮೇಲೆ ಏನು ಪ್ರಶ್ನೆ ಇದೆ, ಸ್ಪಷ್ಟೀಕರಣ ಇದೆ, ಅದನ್ನು ಕೇಳಿ. As on today, a copy has been given to the Library. Library is not the Parliament and is not a table of the House. Secondly, it was made available to the members of the parliament and also the media. Third point is, copies of the commission report has also been given to the presiding officers of both the Houses of Parliament. ಇಷ್ಟು ವಿದ್ಯಮಾನ ನಡೆದಿರತಕ್ಕಂಥಾದ್ದು. ಆದರಿಂದ, ಆ ವರದಿಯನ್ನು ಪಾರ್ಲಿಮೆಂಟ್ ಟೇಬಲ್ ಮೇಲೆ ಪ್ಲೇಸ್ ಮಾಡಿದ್ದರೆ. ಅಲ್ಲಿ ಚರ್ಚೆ ಮಾಡಿದ ನಂತರ ಬೇರೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಾಜ್ಯದವರು ಚರ್ಚೆ ಮಾಡಬೇಕು ಎನ್ನುವ ವಾದ ಒಂದು ಕಡೆ ಇದೆ. ಇನ್ನು ಎರಡನೆಯದಾಗಿ, ಈಗ ಪಾರ್ಲಿಯಮೆಂಟ್ ಲೈಬ್ರರಿಯಲ್ಲಿ ವರದಿಯನ್ನು ಪ್ಲೇಸ್ ಮಾಡಿದ ಮೇಲೆ when it is said it is a public document available to the media and also parliament members and also rest of them it becomes the property of the public. When it becomes the property of the public, it can be discussed in the public, it can also be discussed on the floor of this House and may be in other Houses also. Suppose, if Tamil Nadu house wants to discuss it they can also discuss. They are not prevented. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯವೇನೆಂದರೆ, ಪಾರ್ಲಿಮೆಂಟ್‌ನಲ್ಲಿ ಯಾವುದೇ ಒಂದು ವರದಿಯನ್ನು ಟೇಬಲ್ ಮಾಡಿದ ಮೇಲೆ ಬೇರೆ ಸದನದವರು ಚರ್ಚೆ ಮಾಡಬಹುದಾಗಿದೆ, ಟೇಬಲ್ ಮಾಡಿದ ಮೇಲೆ ಚರ್ಚೆ ಮಾಡಬಾರದೆಂಬ ಪ್ರಶ್ನೆ ಇಲ್ಲ. ಸಾಮಾನ್ಯವಾಗಿ ಯಾವುದೇ ಒಂದು ವರದಿ, ಅದು ಸದನದ ಸಮಿತಿಗಳ ವರದಿ ಇರಬಹುದು ಅಥವಾ ಕಮಿಷನ್ ವರದಿ ಇರಬಹುದು, ಸಾಮಾನ್ಯವಾಗಿ ಆ ವರದಿಯ ಯುಕ್ತಾಯುಕ್ತತೆ ಬಗ್ಗೆ ಅಥವಾ propriety of the report since it is a Judical report, the report is not discussed either in this House or Parliament or anywhere-else. It is only the matter relating to that and the recommendation made therein, that is discussed either in the Parliament or this House. ಇವತ್ತು, ಇಲ್ಲಿ ಬಹಳ ವಿಸ್ತಾರವಾಗಿ ಚರ್ಚೆ ನಡೆಯುತ್ತಿದೆ. Message of the debate sometimes it came out from some member. If you say that you would also like to discuss the propriety of the report then it is a danger note and it is not in consonance with the right convention which has got to be laid in this House or any other House. It has already become the public property. It has not been placed on the table of the House. There is no prohibition to make it public or publicise it or to take action even before it is placed before the table of the House. There is no such prohibition. ಆದ್ದರಿಂದ, ಈ ಬಗ್ಗೆ ನಿರ್ಧಿಷ್ಟವಾದಂಥ ಚರ್ಚೆಗಳು ಪಾರ್ಲಿಯಮೆಂಟಿನಲ್ಲೂ ಕೂಡಾ ನಡೆದಿದೆ. ಈ ಸದನದಲ್ಲಿ ಕೂಡಾ ನಡೆದಿದೆ. ಇದು ಪಾರ್ಲಿಯಮೆಂಟ್‌ನ ಎಕ್ಸ್‌ಕ್ಲೂಸೀವ್ ಸ್ವತ್ತಾಗಿದೆ. ಇದು ಪಾರ್ಲಿಮೆಂಟಿನ ಸ್ವತ್ತಾದರೂ ಚರ್ಚೆ ಮಾಡಬಹುದು. ಆ ವರದಿ ಇನ್ನೂ ಪಾರ್ಲಿಮೆಂಟ್‌ನ ಸ್ವತ್ತಾಗಿಲ್ಲ. It has become a public document. It is left to any House including this House to discuss. Anybody can discuss on this matter. There is absolutely no prohibition which is prescribed under the rules or under the convention.

SRI D. B. CHANDRE GOWDA.—Mr. Speaker. Important Matter in the sense what I feel is or I take is that the presiding officerr of the respective Houses are the custodians of the document as well as rights and privileges of the hon'ble members. Therefore. ಇದನ್ನು ಬಹಳ ವಿಸ್ತಾರವಾಗಿ ಎಳೆಯುತ್ತಾ ಹೋಗುವುದು ಬೇರೆ. ನಾವು ಇತ್ತೀಚೆಗೆ ಬರುತ್ತಾ ಬರುತ್ತಾ ಅನುಕೂಲಕ್ಕೆ ತಕ್ಕಹಾಗೆ ಮಾತನಾಡುತ್ತೇವೆ ಮಾತು ತಪ್ಪು ಆಗಿದ್ದರೆ ಪ್ರಿಂಟ್ ತಪ್ಪಾಗಿದೆ ಎಂದು ಹೇಳುತ್ತೇವೆ, ಪ್ರಿಂಟ್ ಸರಿಯಾಗಿದೆ ಅಂದರೆ ಆಗಿಲ್ಲ ಎಂದು ಹೇಳುತ್ತೇವೆ. ಹೀಗೆಲ್ಲಾ ನಾವು ಹೇಳುತ್ತೇವೆ. ನಾನು ಅದಕ್ಕಾಗಿ ಹೇಳಿಲ್ಲ. I just took up the issue of property. While doing so, I said is. ಈ ವರದಿಯ ಪ್ರತಿಗಳನ್ನು ಸಭಾಧ್ಯಕ್ಷರು ಮತ್ತು ಸಭಾಪತಿಯವರ ಕೈಗೆ ಕೊಟ್ಟಿರುವುದರಿಂದ ಈ ಕುರಿತು ನನ್ನ ಇಂಟರ್‌ಪ್ರಿಟೇಷನ್ ಇಷ್ಟೆ. it is a document as good as placed on the table of the House. ಮೆಂಡೆಟರಿ ಪ್ರಾವಿಶನ್ ಏನಿದೆ ಅಂದರೆ, ಮೂರು ತಿಂಗಳೊಳಗಾಗಿ ವರದಿ ಬಂದ ತತ್‌ಕ್ಷಣ ಅದರ

ಮೇಲೆ ತೆಗೆದು ಕೊಂಡಂತಹ ಆಕ್ಷನ್ ರಿಪೋರ್ಟನ್ನೂ ಸೇರಿಸಿ ಸದನದ ಮುಂದೆ ಇಡಲೇಬೇಕು. ಒಂದು ವೇಳೆ ಸದನ ಸೇರದೇ ಇದ್ದರೆ. ಸದನ ಸೇರಿದಾದ ಸರಕಾರ ಒಂದು ವರದಿಯನ್ನು ತರಿಸಿಕೊಂಡ ಮೇಲೆ ಸದನದ ಪಟಲದ ಮುಂದೆ ಇಡಲಿಲ್ಲ ಎನ್ನುವ ಆಪಾದನೆಯಿಂದ ಮುಕ್ತವಾಗ ಬೇಕಾದರೆ ಇರುವುದು ಒಂದೇ ಮಾರ್ಗ. ಆ ವರದಿಯನ್ನು ಸದನದ ಅಧ್ಯಕ್ಷರ ಕೈಗೆ ಕೊಡುವುದು, ಅದನ್ನು ಇವರು ಮಾಡಿದ್ದಾರೆ ಎಂದು ನನ್ನ ಅಂದಾಜು. ಏಕೆಂದರೆ, ಮುಂದಿನ ಪಾರ್ಲಿಮೆಂಟ್ ಯಾವಾಗ ಸೇರುತ್ತದೆ ಎಂಬುದು ಗೊತ್ತಿಲ್ಲ, ಆದುದರಿಂದ ಮೂರು ತಿಂಗಳ ಒಳಗಾಗಿ ಕೊಡಬೇಕೆನ್ನುವ ಅಪವಾದದಿಂದ ತಪ್ಪಿಸಿಕೊಳ್ಳುವುದಕ್ಕೆ ಹೀಗೆ ಕೊಡಬಹುದು. If that is true, I feel that it is a part and parcel of the document and as good as tabled on the table of the House of the Lok Sabha or Rajya Sabha.

SRI H. EKANTHAIAH.—Sir,

MR. SPEAKER.—No, I have heard enough.

†ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಈ ಕುಲದೀಪ್ ಸಿಂಗ್ ಆಯೋಗದ ವರದಿಯ ಮೇಲೆ ಚರ್ಚೆ ಮಾಡವುದಕ್ಕೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಮಗೆ ಯಾವುದೇ ಆತಂಕವಾಗಲೀ, ಭಯವಾಗಲೀ ಇಲ್ಲ. ಚರ್ಚೆ ಮಾಡಲಿಕ್ಕೆ ನಮ್ಮ ಒಪ್ಪಿಗೆ ಇದೆ. ಆದರೆ ಇಲ್ಲಿ ಬಂದಿರುವ ಪ್ರಶ್ನೆ ಇಷ್ಟೆ. ಕಾನೂನು ಪ್ರಕಾರ ಈ ವಿಚಾರ ಆಯೋಗದವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆಯೋಗದವರು ವರದಿಯನ್ನು ಕೊಟ್ಟ ಮೇಲೆ ರಾಜ್ಯ ಸರಕಾರವಾಗಲಿ, ಕೇಂದ್ರ ಸರಕಾರವಾಗಲೀ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ, ಪರಿಶೀಲನೆ ಮಾಡಿಯಾವ ಶಿಫಾರಸ್ಸುಗಳ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಆ ಸರಕಾರವೇ ತೀರ್ಮಾನ ಮಾಡ ಬೇಕಾಗುತ್ತದೆ. ಅಂಥ ಒಂದು ತೀರ್ಮಾನವನ್ನು ಕುಲದೀಪ್ ಸಿಂಗ್ ಆಯೋಗದ ವರದಿ ಬಂದ 6 ತಿಂಗಳೊಳಗಾಗಿ ಯಾವುದೇ ಸರಕಾರ ಕಾನೂನು ಪ್ರಕಾರವಾಗಿ ಮಾಡಬೇಕಾಗಿತ್ತು. ಅದರ ಬಗ್ಗೆ ಚರ್ಚೆ ಮಾಡುವುದು ಬೇರೆ ವಿಚಾರ. ಆದರೆ ಆಯೋಗದ ಶಿಫಾರಸ್ಸುಗಳ ಮೇಲೆ ತಾವು ಯಾವ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ ? ಕೇಂದ್ರ ಸರಕಾರವು ವಿಚಾರಣಾ ಆಯೋಗವನ್ನು ನೇಮಕ ಮಾಡಿರುವುದರಿಂದ. ಕೇಂದ್ರ ಸರಕಾರಕ್ಕೆ ಆಯೋಗದವರು ವರದಿಯನ್ನು ಕೊಟ್ಟಿರುವುದರಿಂದ, ಕೇಂದ್ರ ಸರ್ಕಾರ ಯಾವುದೇ ಶಿಫಾರಸ್ಸುಗಳನ್ನು ಅಂಗೀಕಾರ ಮಾಡದೆ ಅಥವಾ ಅಂಗೀಕಾರ ಮಾಡಿಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡದ ಹೊರತಾಗಿ ತಾವಾಗಿಯೇ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ? ಆದುದರಿಂದ ಕೇಂದ್ರ ಸರಕಾರ ತೀರ್ಮಾನ ತೆಗೆದುಕೊಂಡ ಮೇಲೆ ಈ ರಾಜ್ಯದ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಕ್ರಮ ತೆಗೆದುಕೊಳ್ಳಬಹುದು. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆ ಒಂದು ಆಯೋಗದ ವರದಿಯ ಆಧಾರದ ಮೇಲೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದು ಕೊಂಡ ಮೇಲೆ ಇಲ್ಲಿ ಚರ್ಚೆ ಮಾಡಿದರೆ ಹೆಚ್ಚು ಉಪಯುಕ್ತವಾಗಬಹುದು. ಅದನ್ನು ಬಿಟ್ಟು ಬರೀ ಚರ್ಚೆ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ.

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದು ಪ್ರೈಪ್ರೋಟಿಗೆ ಸಂಬಂಧಪಟ್ಟಂತಹ ವಿಚಾರ, ಎರಡನೆಯವಿಚಾರ ಏನೆಂದರೆ, ಅದಕ್ಕೆ ಹೊಂದಿ ಕೊಂಡಿರತಕ್ಕಂಥ ನಡವಳಿಕೆ. ಈ ತನಕ ವರದಿ ಯಾವಾಗ ಸಭಾಧ್ಯಕ್ಷರುಗಳ ಕೈಗೆ ಸೇರಿತೊ, ಅದನ್ನು ಯಾವಾಗ ಅವರು ಲೈಬ್ರರಿಯಲ್ಲಿ ಇಟ್ಟರೋ. ಆಗ ಅದು ಸದನದ ಮುಂದೆ ಇಟ್ಟಂಥ ವಿಚಾರ ಆಯಿತು, ಅದು ಸದನದ ಆಸ್ತಿ ಆಯಿತು ಎಂದು ಹೇಳಿದ್ದೀರಿ.

The Commissions of Inquiry Act, 1952 Section 3 clause 4.

"The appropriate Government shall cause to be laid before the House of the People or, as the case may be, the Legislative Assembly of the State, the report, if any of the Commission on the inquiry made by the Commission

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

under sub-section (1) together with a memorandum of the action taken thereon, within a period of six months of the submission of the report by the Commission to the appropriate Government",

೧೨-೨೦ ಪಿ. ಎಂ.

So the Commission has submitted its report just about 20 days ago, If my memory is correct. ಇಲ್ಲಿ ಎರಡು ವಿಚಾರಗಳು ಅಸ್ಪಷ್ಟವಾಗಿವೆ. ಆ ವರದಿ ಕುರಿತು ಯಾವ ಪತ್ರಿಕೆಯಲ್ಲೂ ಕೂಡ ಸರ್ಕಾರ ತಾನು ಏನು ಮಾಡಬೇಕೆಂದು ಉದ್ದೇಶಿಸಿದೆ ಎನ್ನತಕ್ಕಂಥಾದ್ದನ್ನು ಸೇರಿಸಿದ್ದಾರೆ ಅಥವಾ ಇಲ್ಲವೆ ಎಂಬ ಬಗ್ಗೆ ನಾನು ಓದಿದ್ದಿಲ್ಲ, ತಾವು ಯಾರಾದರೂ ಓದಿದ್ದರೆ ಅದನ್ನು ನನ್ನ ಗಮನಕ್ಕೆ ತರಬಹುದು. ಎರಡನೇ ಪ್ರಶ್ನೆ ಏನೆಂದರೆ ಈ ರಾಜ್ಯದಲ್ಲಿ ನಡೆದಿರುವ ವ್ಯವಹಾರದ ಬಗ್ಗೆ ಈ ತನಿಖಾ ವರದಿ ಸಂಬಂಧಿಸಿದೆ. ಆದ್ದರಿಂದ ಈ ರಾಜ್ಯಕ್ಕೆ ಅದು ಅತ್ಯಂತ ಪ್ರಕೃತ ಮತ್ತು ಅತ್ಯಂತ ಅವಶ್ಯಕವೆಂದು ಹಲವಾರು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ನಮ್ಮ ಕಮಿಷನ್ ಆಫ್ ಎನ್‌ಕ್ವಯರಿ ಆಕ್ಟ್ ಪ್ರಕಾರ ಕೇಂದ್ರ ಸರ್ಕಾರಕ್ಕೆ ಇನ್ನೂ ಐದು ತಿಂಗಳು ಅವಕಾಶ ಇದೆ. To inform the Houses of Parliament as to what action they intend taking as a follow up of this report. But if you look strictly at the section itself, if the report has to be placed on the Table of the House, then it becomes mandatory for the Central Government to the action which it intends to take Now, we do not know, it is in the grey area. whatever we have heard or whatever we have read, it is only through Newspapers and so I am not sure whether the the Government have added the action which the intend to take along with the report. It is only between two Presiding Officers of the August Houses of Parliment, So, the report is in the Library. I think wisdom would demand of me to await for a copy of the report which the Leader of the House has assured us that he will be making an attempt to obtain it by this evening, failing which by tomorrow, we will also know more about what the Government of India intends doing as follow up of Kuldip Singh Commission Report. So, I withhold expressing any opinion as to whether, when the Government furnishes the report of a particular Enquiry Commission to the two Presiding Officers, it would be deemed to be placing thereport on the Table of the House. I cannot readly express my opinion on that, So taking all these things into consideration, I would rather wait till we get hold of the copy of the report. But I can assure you that I can understand the anxiety of the Members to debate this particular issue and I find that even the Leader of the Opposition had absolutely no objection over the debate to take place. I think I am quoting you right.

ಶ್ರೀ ಕೆ ಲಕ್ಕಪ್ಪ. - ಮಾನ್ಯ ಅಧ್ಯಕ್ಷರೇ, ನಾನು ೬೮ನೇ ರೂಲ್ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಕ್ಯಾಪಿಟೇಷನ್ ಫೀಸ್ ಮನ್ನಾ ಮಾಡಿದ್ದರೂ ಕೂಡ ಈ ರಾಜ್ಯದಲ್ಲಿ ಪ್ರೊಫೆಶನಲ್ ಕಾಲೇಜುಗಳಲ್ಲಿ, ಮೆಡಿಕಲ್ ಕಾಲೇಜ್‌ಗಳಲ್ಲಿ, ಟೆಕ್ನಿಕಲ್ ಕಾಲೇಜ್‌ಗಳಲ್ಲಿ ವಿಪರೀತ ಡೊನೇಶನ್ನ ತೆಗೆದುಕೊಂಡು ಜನರಿಗೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಇದರಿಂದ ಸರ್ಕಾರದ ಮೇಲೆ ಅನ್ಯಥಾ ಒಂದು ಕೆಟ್ಟ ಗೂಬೆಯನ್ನು ಕೂರಿಸಿರತಕ್ಕಂಥ ಈ ಸಂದರ್ಭದಲ್ಲಿ, ಈ ರಾಜ್ಯದಲ್ಲಿ ಕ್ಯಾಪಿಟೇಷನ್ ಫೀ ಬಗ್ಗೆ ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಅನೇಕ ಪತ್ರಿಕೆಗಳಲ್ಲಿ ವರದಿ

ಯಾಗಿದೆ. ನಮ್ಮ ಸದಸ್ಯರುಗಳೆಲ್ಲ ಅನೇಕ ಸಾರಿ ಇದರ ಬಗ್ಗೆ ಚರ್ಚೆಯನ್ನು ಮಾಡಬೇಕೆಂದು ಕೇಳಿದ್ದಾರೆ. ನಮ್ಮ ಸರ್ಕಾರ ಕೂಡ ಕ್ಯಾಪಿಟೇಶನ್ ಫೀ ವಜಾ ಮಾಡಿದೆ. ಆದರೆ ಫಾಲೋಅಪ್ ಆಕ್ಷನ್ ಮಾಡಿಲ್ಲ ಅಷ್ಟೆ.

ಅಧ್ಯಕ್ಷರು.—ನಿಮ್ಮ ನೋಟೀಸ್ ಬಂದಿದೆ. ಅದನ್ನು ನಾನು ಪರ್ಯಾಲೋಚಿಸುತ್ತಾ ಇದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಪ್ರಮುಖವಾದ ವಿಷಯ. ಏಕೆಂದರೆ, ಈ ರಾಜ್ಯದಲ್ಲಿ ಕ್ಯಾಪಿಟೇಶನ್ ಫೀ ತೆಗೆದುಕೊಳ್ಳಬಾರದೆಂದು ಅದನ್ನು ಪ್ರತಿಬಂಧಿಸುವ ಕಾನೂನು ಇದೆ. ಇವತ್ತು ಕ್ಯಾಪಿಟೇಷನ್ ಫೀ ಯನ್ನು ಸಂಗ್ರಹಣೆ ಮಾಡತಕ್ಕಂಥ ಪ್ರವೃತ್ತಿ ಎಲ್ಲಾ ಭಾಗದಲ್ಲೂ ಇದೆ. ಜೊತೆಗೆ ಪ್ರತಿ ವರ್ಷ ಕಾನೂನು ಪ್ರಕಾರ ಪ್ರತಿಯೊಂದು ಕಾಲೇಜಿಗೆ ಎಷ್ಟು ಸೀಟುಗಳನ್ನು ನಿಗದಿ ಮಾಡಬೇಕು, ಎಷ್ಟು ಫೀಯನ್ನು ಮಾಡಬೇಕು ಎನ್ನುವ ಒಂದು ಆದೇಶ ಕೂಡಾ ಇದೆ. ಅದನ್ನು ಕೂಡಾ ಇವತ್ತು ಸರಿಯಾಗಿ ಅವರು ಪರಿಪಾಲನೆ ಮಾಡುತ್ತಿಲ್ಲ. ಆದುದರಿಂದ ಇವತ್ತು ಕಾನೂನು ಇದ್ದ ಮೇಲೆ ಕಾನೂನು ಪ್ರಕಾರ ನಡೆದುಕೊಳ್ಳತಕ್ಕಂಥದ್ದು ನಮ್ಮ ಕರ್ತವ್ಯ. ಕಾನೂನು ವಿಫಲವಾಗಿದೆ ಎಂದು ಇವತ್ತು ಸರ್ಕಾರದ ಗಮನಕ್ಕೆ ಮತ್ತು ಸಾರ್ವಜನಿಕರ ಗಮನಕ್ಕೆ ತರಬೇಕಾದಂಥ ಅಗತ್ಯ ಇದೆ. ಆದುದರಿಂದ ಸಾರ್ವಜನಿಕರಿಗೆ ಎಷ್ಟು ತೊಂದರೆಯಾಗಿದೆ ಎಂದು ಹೇಳುತ್ತೇನೆ. ಒಂದು ಕಡೆ ಕಾನೂನು ಇದೆ. ಕ್ಯಾಪಿಟೇಷನನ್ನು ರದ್ದು ಮಾಡಿದ್ದೇವೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಸಾರೋಧ್ದಾರವಾಗಿ ಕ್ಯಾಪಿಟೇಷನ್ ಹಾವಳಿ ನಡೆಯುತ್ತಿದೆ.

ಅಧ್ಯಕ್ಷರು.—ಅದನ್ನು ಪರ್ಯಾಲೋಚನೆ ಮಾಡುತ್ತಿದ್ದೇನೆಂದು ಹೇಳಿದ್ದೇನಲ್ಲಾ. ನಿಮ್ಮ ನೋಟೀಸ್ ನಿನ್ನೆ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಪ್ರಾಮುಖ್ಯವಾದ ವಿಚಾರ. ಅನೇಕ ತುದೆ ತಾಯಿಗಳು ಕಣ್ಣೀರು ಇಡುತ್ತಿದ್ದಾರೆ. ಇವತ್ತು ನ್ಯಾಯಕ್ಕೆ ಬೆಲೆ ಇಲ್ಲ ಎನ್ನುವ ಭಾವನೆ ಜನರ ಮನಸ್ಸಿನಲ್ಲಿ ಬಂದಿದೆ. ಈ ಕಾನೂನು ಕೇವಲ ನಾಟಕಕ್ಕೋಸ್ಕರ ಇದೆ ಎನ್ನತಕ್ಕಂಥದ್ದು ಜನರ ಮನಸ್ಸಿಗೆ ಬರುತ್ತಿದೆ. ಆದುದರಿಂದ ದಯವಿಟ್ಟು ಚರ್ಚೆಗೆ ತಾವು ಬೇಗ ಅವಕಾಶ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಕೂಡಾ ಸದನದಲ್ಲಿ ಈ ಕ್ಯಾಪಿಟೇಷನ್ ಬಗ್ಗೆ ಚರ್ಚೆಗೆ ಅವಕಾಶ ಕೇಳಿದ್ದೆ. ಮತ್ತು ನನ್ನದೊಂದು ಗಮನ ಸೆಳೆಯುವ ಸೂಚನೆ ಈ ಸದನದಲ್ಲಿ ಬಂದಿತ್ತು. ವೈದ್ಯಕೀಯ ಕಾಲೇಜುಗಳಿಗೆ, ತಾಂತ್ರಿಕ ಕಾಲೇಜುಗಳಿಗೆ ಪ್ರವೇಶ ಇರುವಾಗ ಈ ಕ್ಯಾಪಿಟೇಷನ್ನಿನದು ಒಂದು ದೊಡ್ಡ ವ್ಯಾಪಾರ ನಡೆಯುತ್ತಿದೆ. ದಯವಿಟ್ಟು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಇದರ ಬಗ್ಗೆ ಇನ್ನಷ್ಟು ಬೆಳಕನ್ನು ಚೆಲ್ಲಿದಾಗ ಸರ್ಕಾರಕ್ಕೂ ಕೂಡಾ ಅನುಕೂಲವಾಗುತ್ತದೆ ಎಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಈಗಾಗಲೇ ಅನೇಕ ಕಡೆಗಳಲ್ಲಿ ಕ್ಯಾಪಿಟೇಷನ್ ಹಾವಳಿ ದೊಡ್ಡದಾಗಿ ಕ್ಯಾನ್ಸರ್ ಬೆಳೆದ ಹಾಗೆ ಬೆಳೆಯುತ್ತಿದೆ. ದಯವಿಟ್ಟು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನಿಮ್ಮದು ಕಾಲ್ ಅಟೆನ್‌ಷನ್ ಇದೇ ವಿಚಾರದಲ್ಲಿ ಆಯಿತಲ್ಲಾ.

ಶ್ರೀ ವಾಟಾಳ್ ನಾಗರಾಜ್.—ಆಯಿತು ಸ್ವಾಮಿ, ಆದರೂ......

ಅಧ್ಯಕ್ಷರು.—ಆಯಿತು. ಆದರೂ......

ಶ್ರೀ ವಾಟಾಳ್ ನಾಗರಾಜ್.—ನಿಯಮ ೧೬೮ರ ಪ್ರಕಾರ ಇವರು ಒಂದು ಸೂಚನೆಯನ್ನು ಕಳುಹಿಸಿದ್ದಾರೆ,

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್‌ಗೆ ನೀವು ಕೇಳಿದ್ದೀರಿ, ನಾನು ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶ ಮಾಡಿಕೊಟ್ಟೆ.

ಶ್ರೀ ವಾಟಾಳ್ ನಾಗರಾಜ್.—ಏನೂ ಆಗಲಿಲ್ಲ ಸ್ವಾಮಿ.

ಅಧ್ಯಕ್ಷರು.—ಅದು ಗೊತ್ತಿಲ್ಲ. ಆಮೇಲೆ ಏನು ಆಯಿತೋ ಗೊತ್ತಿಲ್ಲ. ನಾನು ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶವನ್ನು ಮಾಡಿಕೊಟ್ಟೆ.

ಶ್ರೀ ವಾಟಾಳ್ ನಾಗರಾಜ್.—ಅವಕಾಶ ಮಾಡಿಕೊಟ್ಟಿದ್ದೀರಿ ಧನ್ಯವಾದಗಳು. ಈ ಸಭೆಯ ಮೂಲಕ ಹೇಳತಕ್ಕಂಥ ವಿಷಯಗಳ ಬಗ್ಗೆ ಇದುವರೆಗೂ ಸರ್ಕಾರ ಗಮನವನ್ನು ಹರಿಸಿಲ್ಲ. ಇವತ್ತು ಕ್ಯಾಪಿಟೇಷನ್ ಹಾವಳಿ ಎಲ್ಲಾ ಕಡೆ ಶುರುವಾಗಿದೆ. ಇದರಿಂದ ಬಡ ಮಕ್ಕಳಿಗೆ, ಗ್ರಾಮಾಂತರ ಮಕ್ಕಳಿಗೆ ಬಹಳ ತೀವ್ರತರವಾಗಿ ತೊಂದರೆಯಾಗಿದೆ.

ಅಧ್ಯಕ್ಷರು.—ಅದನ್ನು ಪರ್ಯಾಲೋಚನೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಗಮನಕ್ಕೆ ತರುವುದೇನೆಂದರೆ, ವೈದ್ಯಕೀಯ ಕಾಲೇಜಿನ ಒಂದೊಂದು ಪ್ರವೇಶಕ್ಕೆ ನಾಲ್ಕುವರೆ ಲಕ್ಷ-ಐದು ಲಕ್ಷ ರೂಪಾಯಿಗಳನ್ನು ಇಂಜಿನಿಯರಿಂಗ್ ಕಾಲೇಜಿನ ಒಂದೊಂದು ಪ್ರವೇಶಕ್ಕೆ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲಾ ಮೆಡಿಕಲ್ ಕಾಲೇಜುಗಳು, ಎಲ್ಲ ತಾಂತ್ರಿಕ ಕಾಲೇಜುಗಳು ಈ ಪರಿಸ್ಥಿತಿಗೆ ಬಂದಿದೆ.

ಶ್ರೀ ರಾಮಲಿಂಗ ರೆಡ್ಡಿ.—ಈ ಕ್ಯಾಪಿಟೇಷನ್ ಬಗ್ಗೆ ನಾನು ಕೇಳಿದ್ದೆ.

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ.—ಆಗಲೇ ಅದನ್ನು ಕಳುಹಿಸಿ ೧೫ ದಿವಸ ಆಯಿತು.

ಅಧ್ಯಕ್ಷರು.—೧೫ ದಿವಸ ಆಯಿತಾ?

ಶ್ರೀ ರಾಮಲಿಂಗ ರೆಡ್ಡಿ.—ಅದನ್ನು ದಯವಿಟ್ಟು ಇನ್‌ಕ್ಲೂಡ್ ಮಾಡಿ.

ಅಧ್ಯಕ್ಷರು.—ಆಲ್‌ರೈಟ್.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಮಂಗಳವಾರದ ಈ ವಿಷಯದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದೆ. ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿ ಆಸ್ಟ್ರೇಲಿಯಾದ ಒಬ್ಬ ವ್ಯಕ್ತಿ ವಿದ್ಯಾರ್ಥಿಗಳಿಗೆ ಕೆಲಸವನ್ನು ಕೊಡಿಸುತ್ತೇನೆ. ವಿದ್ಯಾಭ್ಯಾಸವನ್ನು ಕಲಿಸುವಂಥ ಒಳ್ಳೆಯ ವ್ಯವಸ್ಥೆಯನ್ನು ಮಾಡುತ್ತೇನೆ ಎಂದು ಹೇಳಿ ವಂಚನೆ ಮಾಡುತ್ತಿದ್ದಾನೆ ಎಂದು ಈ ಸದನಕ್ಕೆ ತಿಳಿಸಿದ್ದೇನೆ. ಅದರ ಬಗ್ಗೆ ವಿಚಾರಮಾಡಿ ಮತ್ತೆ ಹೇಳುತ್ತೇವೆಂದು ಹೇಳಿದ್ದರು. ಮೊನ್ನೆ ಪತ್ರಿಕೆಯಲ್ಲಿ ಅವನನ್ನು ಇಲ್ಲಿನ ಪೋಲೀಸ್ ಸ್ಟೇಷನ್‌ನವರು ಬಂಧನ ಮಾಡಿ ಬಿಡುಗಡೆ ಮಾಡಿದ್ದಾರೆ ಎನ್ನತಕ್ಕಂಥ ವಿಚಾರ ಬಂದಿದೆ. ಅದು ಏನಾಯಿತು? ಆ ವಿಚಾರ ಎಲ್ಲಿಗೆ ನಿಂತಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕು. ಏಕೆಂದರೆ ಈ ವಿಚಾರದಲ್ಲಿ ಬಹಳ ಹಣವನ್ನು ತೆಗೆದುಕೊಂಡು ಆತ ಮೋಸ ಮಾಡಿದ್ದಾನೆ ಎಂದು ನಾನು ತಮಗೆ ಡಾಕ್ಯುಮೆಂಟರಿಯನ್ನು ಕೊಟ್ಟಿದ್ದೇನೆ.

MR. SPEAKER. The Government have already moved into the matter.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅದು ಏನಾಗಿದೆ ಎಂದು ಈ ಸದನಕ್ಕೆ ತಿಳಿಸಲಿಲ್ಲ.

ಅಧ್ಯಕ್ಷರು.—ಅದನ್ನು ತಿಳಿಸುತ್ತಾರೆ, ಇವತ್ತೇ ಕೊಡುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಬಗ್ಗೆ ಹೇಳಿಕೆಯನ್ನು ಕೊಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಎಲ್ಲದಕ್ಕೂ ಹೇಳಿಕೆಯನ್ನು ಕೊಡಲಾಗುವುದು ಎಂದು ಹೇಳುತ್ತಾರೆ. ತಮ್ಮ ಗಮನಕ್ಕೆ ಈ ವಿಷಯವನ್ನು ತರಬೇಕು. ಬೆಳ್ತಂಗಡಿಯಲ್ಲಿ ಆನೆಯನ್ನು ಕೊಂದಿರುವ ಬಗ್ಗೆ ವರದಿಯನ್ನು ತರಿಸಿ ಈ ಸದನಕ್ಕೆ ಈ ಸಂಜೆಯೊಳಗೆ ಹೇಳಿಕೆಯನ್ನು ಕೊಡುತ್ತೇವೆ ಎಂದು ಹೇಳಿ ಮೂರು ದಿವಸಗಳಾದರೂ ಕೂಡಾ ಆನೆ ಕೊಂದಿರುವ ಬಗ್ಗೆ ವರದಿ ಬರಲಿಲ್ಲ ಹೇಳಿಕೆ ಕೊಡಲಿಲ್ಲ. ನಮ್ಮ ಮಾನ್ಯ ಸಚಿವರು ಪ್ರತಿಯೊಂದನ್ನು ಕೂಡಾ ಕೊಡಲಾಗುವುದು, ಹೇಳಿಕೆಯನ್ನು ಈ ಸಂಜೆ ಕೊಡಲಾಗುವುದು. ಬೆಳಿಗ್ಗೆ ಹೇಳಿಕೆಯನ್ನು ಕೊಡಲಾಗುವುದು, ಪರಿಶೀಲಿಸಲಾಗುವುದು ಎಂದು ಹೇಳುತ್ತಾರೆ.

ಅಧ್ಯಕ್ಷರು.—ಅವರು ಹೇಳಿದ್ದನ್ನೆಲ್ಲಾ ಕೊಟ್ಟೇ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಬೆಳ್ತಂಗಡಿ ಬಗ್ಗೆ......

ಅಧ್ಯಕ್ಷರು.—ಬೆಳ್ತಂಗಡೀದು ಒಂದು ಮಿಸ್ ಆಗಿದೆ. ಅದನ್ನು ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು.—ಅಗತ್ಯವಾಗಿ.

ಶ್ರೀ ವಾಟಾಳ್ ನಾಗರಾಜ್.—ಈ ಕೊಂಕಣ ರೈಲ್ವೆ ಬಗ್ಗೆ ಹೇಳಿದೆವು, ಅದು ಬರಲಿಲ್ಲ. ಇಂ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದೆವು. ಕೊಂಕಣ ರೈಲ್ವೆ ಬಗ್ಗೆ ಹೇಳಿಕೆ ಬರಲಿಲ್ಲಥ ಮತ್ತು ಕೇಂದ್ರದ ಜೊತೆಯಲ್ಲಿ ಕಾವೇರಿ ನದಿ ಯೋಜನೆ ಬಗ್ಗೆ ಏನು ಮಾತನಾಡಿದರು ಎಂದು ಕೇಳಿದೆ. ಅದೂ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು, ನಮ್ಮ ಮಾನ್ಯ ಮೊಯಿಲಿಯವರೇ, ಇಡೀ ಸರ್ಕಾರದ ಪರವಾಗಿ ಎಲ್ಲವನ್ನು ತಲೆಯ ಮೇಲೆ ಹೊತ್ತು ಕೊಂಡು ಪ್ರತಿಯೊಂದನ್ನು ಕೇಳುತ್ತೇವೆ ಕೇಳುತ್ತೇವೆ ಎಂದು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ವಾಟಾಳ್ ನಾಗರಾಜರಿಗೆ ಬಹುಶಃ ಇದು ಒಂದು ವಾಡಿಕೆಯಾಗಿದೆ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದೀರಿ, He has to reply.

SRI M. VEERAPPA MOILY.—I am sorry. Till today whatever promised have been made by me, the statements have been furnised by me an the same day. Not even a single statement is pending, so for as my promises are concerned,

ಶ್ರೀ ವಾಟಾಳ್ ನಾಗರಾಜ್.—ಬೆಳ್ತಂಗಡಿಯ ಬಗ್ಗೆ ಎಲ್ಲಿ ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಕೊಡುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ವಿಷಯದಲ್ಲಿ ಉದ್ವೇಗಕ್ಕೆ ಒಳಗಾಗತಕ್ಕಂಥಾದ್ದು ಬೇಡ. So far as Hon 'ble Minister Sri M. Veerppa Moily is concerned, it is true. ಆದರೆ ನಾನು ತಮ್ಮ ಜೊತೆಯಲ್ಲಿ ಕೊನೆಯ ಪಕ್ಷ ಆರು ಸಾರಿ ಪ್ರಸ್ತಾಪ ಮಾಡಿದ್ದೇನೆ. ಕೊಂಕಣ ರೈಲ್ವೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದರು. ಅವರು ದೆಹಲಿಯಿಂದ ಬಂದ ತಕ್ಷಣ ಹೇಳಿಕೆಯನ್ನು ಕೊಡುತ್ತೇನೆ, ನಾಳೆ ಕೊಡುತ್ತೇನೆ, ನಾಡಿದ್ದು ಕೊಡುತ್ತೇನೆ ಎಂದು ಹೇಳಿದರು. ಅದು ಮಾನ್ಯ ಪುಟ್ಟಸ್ವಾಮಿಗೌಡರಿಗೂ ಸಹ ಗೊತ್ತಿದೆ. ನಾನು ಏನು ನಿರೀಕ್ಷಣೆ ಮಾಡಿದ್ದೆ ಅಂದರೆ, ಅವರು ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಏನಾದರೂ ಬೆಳಕು ಚೆಲ್ಲ ಬಹುದು ಎಂದು. ನಮ್ಮ ಸ್ಥಿತಿ ಏನಾಗಿದೆ ಅಂದರೆ, ಈಗ ನಾನು ಒಂದು ಪಟ್ಟಿ ಮಾಡಿ ಇಟ್ಟಿದ್ದೇನೆ. ನಾಳೆ ಮುಖ್ಯ ಮಂತ್ರಿಗಳ ಬೇಡಿಕೆಗಳ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಈ ಸದನದಲ್ಲಿ ಏನೇನು ಹೇಳಿಕೆಗಳು ಬಂದಿವೆ, ಎಷ್ಟು ಕೆಲಸ ಆಗಿದೆ ಎಂದು ಹೇಳುತ್ತೇನೆ. ಅವರು ಕೊಂಕಣ ರೈಲ್ವೆ ಬಗ್ಗೆ ಹೇಳುತ್ತೇನೆ ಎಂದು ಹೇಳಿ ೧೫ ದಿದ ಆಯಿತು. ಇದುವರೆಗೆ ಹೇಳಿಕೆ ಬಂದಿಲ್ಲ.

ಅಧ್ಯಕ್ಷರು.—ಮಾನ್ಯ ಲೋಕೋಪಯೋಗಿ ಸಚಿವರೆ ಇದನ್ನು ಗಮನಿಸಿ ನಾಳೆ ನೀವು ಸ್ಟೇಟ್ ಮೆಂಟ್ ಮಾಡುತ್ತೀರ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಹಿಳಾ ಸದಸ್ಯರು ಮಾತನಾಡ ಬೇಕೆಂದು ಆಗಲಿಂದ ಎದ್ದು ನಿಂತಿದ್ದಾರೆ. ಆದ್ದರಿಂದ ದಯುವಿಟ್ಟು ಮೊದಲು ಅವರಿಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

MR SPEAKER.—I do not want canvassing inside the House, You can do it outside. She has, as much right as you have got, to catch my eye.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಈ ದಿನ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಚಿಕ್ಕ ಮಗಳೂರು ಜಿಲ್ಲೆಯ ಕಡೂರು, ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ೧೬ ವರ್ಷಕ್ಕೆ ಮೇಲ್ಪಟ್ಟ ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ ಎನ್ನುವ ವಿಚಾರ ಬಂದಿದೆ. ಅವರನ್ನು ಅಪಹರಣ ಮಾಡಿ ಬಾಂಬೆಗೆ ಸಾಗಿಸುತ್ತಿದ್ದಾರೆ ಎಂದು ಅಲ್ಲಿನ ಜಿಲ್ಲಾ ಪೋಲೀಸ್ ಅಧಿಕಾರಿ ಹೇಳಿಕೆ ಕೊಟ್ಟಿರುವುದು ಸಹ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ನಾನು ಇವೊತ್ತು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೇನೆ. ನಾಳೆ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಎಷ್ಟು ಹೊತ್ತಿಗೆ ಕೊಟ್ಟಿದ್ದೀರಿ, ಬೆಳಿಗ್ಗೆ ೧೦-೦೦ಗಂಟೆಗೆ ಕೊಟ್ಟಿದ್ದೀರಿ, ಈಗ ನಿಯಮ ೩೩೪ರ ಮೇರೆಗಿನ ವಿಷಯಗಳು,

ನಿಯಮ ೩೩೪ರ ಮೇರೆಗೆ

೧. ಸರಕಾರದ ಒಂದೇ ಇಲಾಖೆಯ ಒಂದೇ ವಿಭಾಗದಲ್ಲಿ ನಿರಂತರ ಸೇವೆ ಸಲ್ಲಿಸುವವರ ವರ್ಗಾವಣೆ

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚಿನ ವರ್ಗಾವಣೆಯ ಸಂದರ್ಭದಲ್ಲಿ ಸರಕಾರದ ವಿವಿಧ ಇಲಾಖೆಗಳ ನೌಕರರು ತಮ್ಮ ಅಪೇಕ್ಷೆ ಇರಲಿ, ಇಲ್ಲದಿರಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ವರ್ಗಾಯಿಸಲ್ಪಟಿದ್ದಾರೆ. ರಾಜ್ಯದ ದಕ್ಷಿಣ ತುದಿಯಿಂದ ಉತ್ತರದ ಕೊನೆಗೆ, ಪಶ್ಚಿಮದಿಂದ ಪೂರ್ವಕ್ಕೆ ಆಗ್ನೇಯದಿಂದ ವಾಯುವ್ಯಕ್ಕೆ, ನೈರುತ್ಯದಿಂದ ಈಶಾನ್ಯಕ್ಕೆ, ನಡುವಿನಿಂದ ಕಡೆಯಭಾಗಕ್ಕೆ, ಈ ಕೊನೆಯಿಂದ ಮತ್ತೆಲ್ಲಿಗೋ ವರ್ಗವಾದ ನಿದರ್ಶನಗಳು ಹಲವಾರು, ಆದರೆ ಅದೇಕೋ ವಿಧಾನ ಸೌಧದಲ್ಲಿ ಕೆಲವು ಕಛೇರಿಗಳ ಕೆಲವು ವಿಭಾಗಗಳಲ್ಲಿರುವ ಕೆಲವುಮಂದಿ ಅನೇಕ ವರ್ಷಗಳಿಂದ ಅಲ್ಲಿಯೇ ಇರುವುದು, ಬಡ್ತಿಹೊಂದಿದಾಗ ಸಹಾ ಅವರವರ ಯೋಗ್ಯತೆಗೆ ತಕ್ಕುದಾದ ಕುರ್ಚಿ ಒದಗಿಸಲ್ಪಡುವುದು ಕಂಡು ಬಂದಿದೆ. ಇದರಿಂದ ಆಡಳಿತ ಸುಧಾರಣಾ ಇಲಾಖೆ "ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ" ಒರೆಸಿದಂತಾಗಿದೆ. ಸದಾಸರ್ವದಾ ಸುಣ್ಣದ ಖಾರದಿಂದ ಕಣ್ಣು ಕುರುಡಾಗುವ ಬದಲು ಒಮ್ಮೊಮ್ಮೆ ಆದರೂ ಬೆಣ್ಣೆ ಸವರಿ, ನಿರಂತರ ಹತಭಾಗಿಗಳಾದವರಿಗೆ ನ್ಯಾಯ ದೊರಕಿಸಬೇಕೆಂದೂ. ಆಡಳಿತ ವ್ಯವಸ್ಥೆ 'ನಿಂತ ನೀರಾ' ಗದಂತೆ ನೋಡಿಕೊಳ್ಳಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ, (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ /ನೌಕರರನ್ನು ಸಾಧಾರಣವಾಗಿ ೫ ವರ್ಷಗಳ ನಂತರ ವರ್ಗಾವಣೆ ಮಾಡಬೇಕೆಂಬ ಪದ್ಧತಿ ರೂಢಿಯಲ್ಲಿದೆ. ಆದರೆ ಕೆಲವು ಇಲಾಖೆಗಳಲ್ಲಿ ಆದರಲ್ಲೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳಲ್ಲಿ ೫ ವರ್ಷಕ್ಕೂ ಮೀರಿ ಕೆಲವು ನೌಕರರುಗಳನ್ನು ಮುಂದುವರೆಸಲಾಗಿದೆ.

ಆರ್ಥಿಕ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ / ನೌಕರರು ವ್ಯವಹರಿಸುತ್ತಿರುವ ವಿಷಯಗಳಲ್ಲಿ ಪರಿಣಿತರಾಗಿರುವುದರಿಂದ ಹಾಗೂ ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಗರಿಷ್ಟ ಪರಿಮಿತಿ ಮೀರಿದ್ದರೂ ಸಹ ಅವರುಗಳನ್ನು ಮುಂದುವರಿಸಬೇಕಾಗಿದೆ. ಈ ವಿಷಯವನ್ನು ಅನೇಕ ಬಾರಿ ಅಧಿಕಾರಿಗಳ ಮಟ್ಟದ ಸಭೆಯಲ್ಲಿ ಚರ್ಚಿಸಲಾಗಿದ್ದು ಈ ಇಲಾಖೆಗಳಲ್ಲಿ ನಿರ್ವಹಿಸುತ್ತಿರುವ ಕೆಲಸವು ವಿಶಿಷ್ಟ ಸ್ವರೂಪದ್ದಾಗಿದ್ದು ಮತ್ತು ಈ ಇಲಾಖೆಗಳಲ್ಲಿ ನಿಯಮಗಳನ್ನು ರಚಿಸಲಾಗುವುದರಿಂದ ಸ್ಮೃತಿ ಶಕ್ತಿ (memory) ಹಾಗೂ ಮುಂದುವರಿಕೆ (continuity) ಅಗತ್ಯವಾಗಿರುತ್ತದೆ. ಇದೆ ಕಾರಣಕ್ಕಾಗಿಯೇ ಇತರೆ ಇಲಾಖೆಗಳಲ್ಲಿಯೂ ಸಹ ಕೆಲವೊಂದು ಅಧಿಕಾರಿ /ನೌಕರರನ್ನು ೫ ವರ್ಷದ ನಂತರವೂ ಮುಂದುವರಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಇಂಥಹ ಅಧಿಕಾರಿ / ನೌಕರರನು ಅವರ ಬಡ್ತಿಯ ನಂತರವೂ ಅದೇ ಇಲಾಖೆ ಶಾಖೆಯಲ್ಲಿ ಲಭ್ಯವಿರುವ ಹುದ್ದೆಗಳಲ್ಲಿ ಮುಂದುವರೆಸಬೇಕಾಗುತ್ತದೆ. ಆದುದರಿಂದ ೫ ವರ್ಷದ ಮಿತಿಯನ್ನು ಪಾಲಿಸಲು ಸಾಧ್ಯವಾಗಿಲ್ಲ.